ಕೊರವಂಜಿ

KURAVAN[JI]
Kannada Month[ly]



ಫೆಬ್ರವರಿ

೧೯೬೫

ಸಂಪಾದಕರು:

ಶ್ರೀ ರಾ. ಶಿ.


ಬರೆಯುವವರು:

ಶ್ರೀ|| ಅ. ರಾ. ಸೇ.
ಶ್ರೀ|| ನಾ. ರಾ.
ಶ್ರೀ|| ಕೇಫ
ಶ್ರೀಮತಿ|| ಟಿ. ಸುನಂದಮ್ಮ
ಶ್ರೀ|| ಕೆ. ಎಸ್. ಕಸ್ತೂರಿ
ಶ್ರೀ|| ಕುಮಾರ್

ಇತ್ಯಾದಿ ಇತ್ಯಾದಿ

೨೫ ಪೈ.

ಶಿಷ್ಟನಗೆಯ ಮಾಸಪತ್ರಿಕೆ


ಕರ್ನಾಟಕ ಫಿಲಂಸ್
ಅರ್ಪಿಸುವ
ಫೆಬ್ರುವರಿ
5
ವಿವಿಧ
ಭಾರತಿಯವರ
(ಕನ್ನಡ)
ಸಾಹಿತ್ಯ-ನಿರ್ದೇಶನ / ಕು.ರ.ಸೀತಾರಾಮ ಶಾಸ್ತ್ರಿ
INDRA KATAKA
ಕರ್ನಾಟಕ.ಹಂಚಿಕೆ

ಕೊರವಂಜಿ

A. ANANTHIAH.

ಸಂಪುಟ ೨೩] ಫೆಬ್ರವರಿ ೧೯೬೫ [ಸಂಚಿಕೆ ೧೧

ಅಭಿವಂದನೆ

ಗರ್ಭಾವಸ್ಥೆಯಲ್ಲಿದ್ದಾಗಿನಿಂದಲೂ ಕೊರವಂಜಿಯನ್ನು ಕಂಡಿದ್ದ; ಶೈಶವ, ಬಾಲ್ಯ, ತಾರುಣ್ಯ ಈ ಮೂರೂ ಅವಸ್ಥೆಗಳಲ್ಲಿಯೂ ಆಕೆಗೆ ಬೆಂಬಲ. ಸ್ಫೂರ್ತಿ, ಅರಿವು, ಅರಿವಿನ ಮೂಲ ತಳಹದಿಯಾದ ನಗು. ಇವೆಲ್ಲವನ್ನೂ ಧಾರಾಳವಾಗಿ ಒಲವಿನಿಂದ ಒದಗಿಸಿಕೊಟ್ಟ ಶ್ರೀಮಾನ್ ಬಿ. ಪುಟ್ಟಸ್ವಾಮಯ್ಯನವರಿಗೆ ಕೇಂದ್ರ ಸಾಹಿತ್ಯ ಅಕ್ಯಾಡಮಿಯ ಬಹುಮಾನ ಸಂದುದು ಕೊರವಂಜಿಗೆ ಬಲು ಆನಂದದಾಯಕವಾದ ಸುದ್ದಿ. ಈ ಲೋಕದಲ್ಲೂ ನಮ್ಮ ಕಾಲದಲ್ಲೂ ಒಮ್ಮೊಮ್ಮೆ ಕಠಿಣ ತಪಸ್ಸಿಗೆ ಪ್ರತಿಫಲ ದೊರಕುತ್ತದೆ ಎಂದು ಕೊರವಂಜಿಗೆ ನಂಬಿಕೆ ಹುಟ್ಟಿದೆ.

ಸಂತೋಷದ ಸುದ್ದಿಯನ್ನು ಕೇಳಿದ ೨೩ರ ಪ್ರಾಯದ ಕೊರವಂಜಿ ಏನು ಮಾಡಿದಳು ಗೊತ್ತೆ ? ಬಲು ಖುಷಿಯಾಯಿತು, ಆನಂದವಾಯಿತು ಎಂದು, ಸದಾ ಪಿತ್ತ ಪ್ರಕೃತಿಯಿರುವ ಈ ಕಾಡು ಹುಡುಗಿ, ಮನೆಯಲ್ಲಿ ಚಿಗುಲಿ ಉಂಡೆ ಕಟ್ಟಿಸಿ, ಬೇಕಾದವರಿಗೆಲ್ಲಾ ಹಂಚಿದಳು.

ಒಲವಿನಿಂದ, ಹಾಗೂ ಭಕ್ತಿಯಿಂದ, ಬಿರಿಯುತ್ತಿರುವ ಎದೆಯಿಂದ ಹಾಗೂ ಹೃದಯಾಂತರಾಳದಿಂದ, ಶ್ರೀಯುತರನ್ನು ಅಭಿವಂದಿಸುತ್ತಾಳೆ.

“ ತನುವ ತೋಟವ ಮಾಡಿ,
ಮನವ ಗುದ್ದಲಿಯ ಮಾಡಿ.
ಅಗಿದು ಕಳೆದನಯ್ಯಾ, ಈತ, ಭ್ರಾಂತಿನ ಬೇರ.

೩ ಕು ಹ ಕಿ ಡಿ ಗ ಳು ೩

ಇಬ್ಬರು ಮದ್ರಾಸಿನಲ್ಲಿ ಹಿಂದಿ ವಿರುದ್ಧ ಅಗ್ನಿಪ್ರವೇಶ ಮಾಡಿ ಸಮಿತಿ ಮಕ್ಕಳಿಗೆ ಸಮಾನಾವಕಾಶ ಕೊಡಿಸುವ ಆತ್ಮಯಜ್ಞ ಮಾಡಿದರಂತೆ.

*　　*　　*　　*

೨ ಪೈಸೆ ನಾಣ್ಯಗಳನ್ನು ರಟ್ಟಿನ ಕಾಗದದಲ್ಲಿ ತಯಾರಿಸಿದ್ದಾರೆ ಎಂದು ಹೇಳು ವುದು ಕುಹಕ.

—ಕಾಗದದ ತರಹ ಇದೆ. ಆದರೆ ದಿಟವಾಗಲೂ ಲೋಹದಿಂದ ತಯಾರಿ ಸಿದ್ದಾರೆ !

*　　*　　*　　*

ಅಂತರ್ರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ತೀರ್ಪುಗಾರರನ್ನಾಗಿ ಕೇವಲ ಹಿಂದೀಯರನ್ನೇ ನೇಮಿಸದಿದ್ದುದು, ರಾಷ್ಟ್ರದ್ರೋಹ, ಎಂದು ಉತ್ತರೇಯರು ಇನ್ನೂ ಹೇಳಿಲ್ಲವಂತೆ.

*　　*　　*　　*

ಸೇಬಿನ ಹಣ್ಣು ಮೈಗೆ ಒಳ್ಳೆಯದು.

(ವೈದ್ಯ ಪತ್ರಿಕೆ)

—ಆಡಂ ಸೇಬು ತಿಂದ, ಭೂಲೋಕ ಉದಯವಾಯಿತು.
ನ್ಯೂಟನ್ ತಲೆ ಮೇಲೆ ಸೇಬು ಬಿತ್ತು—ಅಣು, ಇತ್ಯಾದಿ ಬಾಂಬು ಉದಯವಾ ಯಿತು. ಆದರೂ ವೈದ್ಯರ ಸಲಹೆ ! !

*　　*　　*　　*

ಸಾವಿರ ಕಾಲಿನ ತರಹ ಎರಡು ಕಿಲೋಮೀಟರ್ ಉದ್ದ ನಿಂತಿದ್ದ "ಕ್ಯೂ" ಜನರನ್ನು ತೋರಿಸಿ, ಕಮ್ಯೂನಿಸ್ಟ್ ಪೀಕಿಂಗ್‌ನವರು "ಇವರೆಲ್ಲಾ ಆಹಾರಕ್ಕೆ ಕಾದು ನಿಂತಿದ್ದಾರೆ" ಎಂದು ಪ್ರಚಾರ ನಡೆಸಿದರಂತೆ.

—ಕ್ಯೂ ನಿಂತಿದ್ದು ದಿಟ, ಆದರೆ ಸಿನಿಮಾ ನೋಡುವುದಕ್ಕೆ !

*　　*　　*　　*

ಮಲಯಾಳದ ಅಚ್ಚ್ಯುಚನ್ ಕೇಳಿದನಂತೆ "ಸ್ವಲ್ಪ ಅರುಳು ಮರುಳು, ನನಗೆ ! ಸುಖೀರಾಜ್ಯ ಸ್ಥಾಪಿಸುತ್ತೀನಿ ಅಂತ ಹೇಳಿದವರು, ಕಮ್ಯೂನಿಸ್ಟರೇ ? ಮುಸ್ಲಿಂ ಲೀಗಿ ನವರೇ ? ಕಾಂಗ್ರೇಸಿನವರೇ ? ಸ್ವತಂತ್ರಪಕ್ಷದವರೇ ?" ಎಂದು.

*　　*　　*　　*

ಆಹಾರದ ಅಭಾವದ ಗುಲ್ಲೋ ಗುಲ್ಲು ನಿಲ್ಲಬೇಕಾದರೆ,

—ಚುನಾವಣೆಗಳನ್ನು ಸಾರ್ವತ್ರಿಕವಾಗಿ ಏರ್ಪಡಿಸಬೇಕು !!

ಬ್ರಿಟನ್ನಿನ ವಿದ್ಯಾರಣ್ಯ

★

ಅವನ ಹಣೆಬರಹವೇ ಹೀಗೆ !

ನಮ್ಮ ಕೊರವ ಮನಸ್ಸಿನಲ್ಲಿ ತುಂಬಾ ಸಂಕಟ ಪಟ್ಟುಕೊಂಡು, ಏನಾದರೂ ಮಾತನಾಡಿದರೆ, ಜನ ನಗ್ತಾರೆ, ಪಕ್ಕೆ ಹರಿಯುವ ಹಾಗೆ ನಗ್ತಾರೆ. ಆದರೆ ನಗಿಸಬೇಕು ಅಂತ ತುಂಬಾ ಪ್ರಯಾಸ ಪಟ್ಟು, ಯೋಚನೆ ಮಾಡಿ, ಎಲ್ಲೆಲ್ಲಿಂದಲೂ ಕದ್ದು ಕಳಚಿ, ಬಾಯಿಪಾಠ ಮಾಡಿ ಹೇಳಿದರೆ, ಜನ ಅಳ್ತಾರೆ,

ಯಾಕೆ ಹೇಳುಕ್ಕೆ ಬಂದೆ, ಅಂದರೆ, ಮೊನ್ನೆ ಕ್ಲಬ್ಬಿಗೆ ಕೊರವ ಬಂದಾಗ ಚರ್ಚಿಲ್ ಸಿಗಾರನ್ನು ತುಟಿಯಲ್ಲಿ ಚೀಪುತ್ತಾ ಇದ್ದ. ಮೂಗಿಗಿಂತಲೂ ಮೂರಂಗುಲ ಉದ್ದ ಇದ್ದ ಆ ಸಿಗಾರೋ ? ಹಸಿ ಸೌದೆ ತರಹ ಹೊಗೆಯಾಡಿಸುತ್ತಿತ್ತು. ಬಂದವನು ಬರೀ ಕೈಯ್ಯಲ್ಲಿ ಬಂದಿದ್ದಾ ಅಂತೀರಾ ? ಇಲ್ಲ. ಬ್ರಾಂದಿ ಬುಡ್ಡಿ ಹಿಡಿದುಕೊಂಡು ಬಂದಿದ್ದ. ಎಲ್ಲಿ ಕುಳಿತುಕೊಂಡಾ ಅಂತೀರೀ ? ನಮ್ಮ ಅರವಾಮೊದ್ದು ಪಕ್ಕದಲ್ಲಿ.

ಮೇಜಿನ ಸುತ್ತ ಕುಳಿತಿದ್ದ ನಮಗೆಲ್ಲಾ "ಒಂದೊಂದು ಗುಟುಕು ತರ್ಪಣ ಬಿಡ್ರೋ !" ಅಂತ ಹೇಳಿ ಎಲ್ಲರಿಗೂ ತಾನು ತಂದ ತೀರ್ಥ ಹಂಚಿದ. ಬೇಗ ಹುಷಾರು ಕೊಟ್ಟ. "ತರ್ಪಣಾನ ತಟ್ಟೆಗೆ ಬಿಡಬೇಡ್ರೋ ! ನಿಮ್ಮ ನಿಮ್ಮ ಗಂಟಲಿಗೆ ಬಿಡ್ರೋ" ಅಂತಂದ.

"ಯಾರಿಗೋ ತರ್ಪಣ ? ಗಂಟಲಿಗ್ಯಾಕೋ " ಎಂದೆವು ನಾವು.

"ಚರ್ಚಿಲ್ಲಿಗೆ ತರ್ಪಣ ಕಣ್ರೋ ! ಅಂತಹ ಮಹಾ ಅವತಾರಿಗೆ ತರ್ಪಣ ಬಿಟ್ಟರೆ, ಗಂಟಲಿನಲ್ಲೇ ಬಿಡಬೇಕು " ಅಂದ.

"ಬ್ರಾಂದಿಯನ್ನು ಕಂಡರೆ ಚರ್ಚಿಲ್ಲಿಗೆ ಪ್ರೀತಿ ಅಂತ ಕೇಳಿದ್ದೆವು. ಆತನಿಗೆ ಕೊಡಬೇಕಾದವರು ಬ್ರಾಂದಿಯಲ್ಲೇ ಕೊಡಲಿ. ಆದರೆ ನಾವು ಯಾಕೆ ಹಾಗೆ ಮಾಡ ಬೇಕು ?" ಎಂದು ಅರವಾ ಮೊದ್ದು ಕೇಳಿಯೇ ಬಿಟ್ಟ. ಕೊರವನನ್ನು ಮಿಕ್ಕವರು ಹಾಗೆಲ್ಲಾ ಕೆಣಕುವುದಿಲ್ಲ. ಆದರೆ ಒಮ್ಮೆ ಅರವಾ ಮೊದ್ದು ಕೇಳಿದರೆ ಮಿಕ್ಕವರೂ ಪ್ರಶ್ನೆಗಳನ್ನು ಕೇಳುವುದುಂಟು, ಸ್ವಲ್ಪ ಧೈರ್ಯ ತಂದುಕೊಂಡು, ರಾಜು ಕೇಳಿದ "ಮಹಾ ಅವತಾರಿ ಅಂತೆ ಅಂದೆಯಲ್ಲ ? ಯಾವ ದೇವರ ಅವತಾರ ಅವನು ?" ಎಂದು.

" ಚರ್ಚಿಲ್ ಯಾರು ಅಂತ ತಿಳಿದುಕೊಂಡಿದ್ದೀರಿ ? ಆತ ಜೂಲಿಯಸ್ ಸೀಸರ್‌ನ ಗೋತ್ರದವನು. ವಿದ್ಯಾರಣ್ಯರ ಪುನರಾವತಾರ. ನಿಮಗೆ ತಿಳಿಯದೇ ?" ಎಂದ ಕೊರವ. ಗಂಭೀರವಾದ ದನಿಯಲ್ಲೇ ಹೇಳಿದ. ಅದಕ್ಕೇ ನಮಗೆ ಕುಹಕ ಮುಂದುವರೆಸಲು ಹೆದರಿಕೆ. ಆದರೂ ಹುಚ್ಚೆತ್ತಿ ಅರ್ಥವಾಗಲಿಲ್ಲ ಎಂದು ತಿಳಿಸಿದೆವು.

" ನೋಡ್ರೀಪ್ಪಾ! ಪ್ರಪಂಚದ ಚರಿತ್ರೆಯಲ್ಲಿ ಮಹಾ ಮಹಾ ಸಾಹಿತಿಗಳಿದ್ದಾರೆ. ಚಿರಂಜೀವಿಗಳಾಗಿದ್ದಾರೆ, ಷೇಕ್ಸ್ಪಿಯರ್, ವಾಲ್ಮೀಕಿ, ವ್ಯಾಸ, ಕಾಳಿದಾಸ, ಇತ್ಯಾದಿ. ಮಹಾಮಹಾ ಸಮರ ನಿಪುಣರಿದ್ದಾರೆ ತೈಮೂರ್‌ಲೇನ್, ಶಿವಾಜಿ, ನೆಪೋಲಿಯನ್, ಗೇರಿಬಾಲ್ಡಿ, ಇತ್ಯಾದಿಗಳು.

ಆದರೆ ಹಿರಿಯ ಸಾಹಿತಿಯೂ ಆಗಿ, ಆ ತೆರದ ರೀತಿ ಚಿರಂಜೀವಿಯಾಗಿದ್ದೂ, ಜತೆ ಜತೆಯಲ್ಲೇ ಸಮರ ನಿಪುಣನಾಗಿ ರಾಷ್ಟ್ರವನ್ನು ಉಳಿಸಿ, ಬೆಳೆಸಿ, ಚಕ್ರಾಧಿಪತ್ಯ ಸ್ಥಾಪಿಸಿದವರು, ಚರಿತ್ರೆಯಲ್ಲಿ ಮೂವರೇ. ಜೂಲಿಯಸ್ ಸೀಸರ್, ರೋಮನ್ ಚಕ್ರಾಧಿಪತ್ಯವನ್ನು ಕಟ್ಟಿದುದೂ ಅಲ್ಲದೇ, ತನ್ನ " ಕಾಮೆಂಟರಿ " ಗಳಿಂದ ಮಾನವನ ಜ್ಞಾನಭಂಡಾರಕ್ಕೆ ಹಿರಿಯ ಕಾಣಿಕೆಯಿತ್ತ. ಅದಾದಮೇಲೆ ವಿದ್ಯಾರಣ್ಯರು ಅನ್ವರ್ಥ ಹೆಸರಿನವರಾಗಿ ಪಂಚದಶಿ ಇತ್ಯಾದಿ ಅಮೋಘ ಸಾಹಿತ್ಯದ ಕಾಣಿಕೆಗಳನ್ನಿತ್ತರು. ಜತೆ ಜತೆಯಲ್ಲೇ ವಿಜಯನಗರದ ಸಾಮ್ರಾಜ್ಯವನ್ನೂ ಕಟ್ಟಿ ಹಿಂದೂ ಧರ್ಮದ ಉಳಿಯುವಿಕೆಯನ್ನು ಸಾಧಿಸಿದರು. ಅನಂತರ ಸಿಗುವ ಉದಾಹರಣೆ ಎಂದರೆ ವಿನ್‌ಸ್ಟನ್ ಚರ್ಚಿಲ್ ! ಮಾತುಗಳ ಮೋಡಿಯಿಂದ. ಕೇವಲ ಕುಂಟನನ್ನೂ ಲಂಘಿಸುವಂತೆ ಹುರಿದುಂಬಿಸಿ, ಮೂಕರು ಕೂಡ ಜಯಘೋಷ ಮಾಡುವಂತೆ ಉದ್ರೇಕಿಸಿದ, ಮಹಾನ್ ಮಾಂತ್ರಿಕ. ಎರಡನೇ ಮಹಾ ಯುದ್ಧದಲ್ಲಿ ಸ್ವಾತಂತ್ರ ಪ್ರಿಯರಿಗೆ ವಿಜಯ ಗಳಿಸಿ ಕೊಟ್ಟ. ಹಾಗೂ ತಾನು ಬರೆದು ಪ್ರಪಂಚಕ್ಕೆ ಇತ್ತ ಪುಸ್ತಕಗಳಿಂದ, ಸಾಹಿತ್ಯಕ್ಕೆ ಕಾಣಿಕೆಯನ್ನೂ ಸಲ್ಲಿಸಿದ. ಸಾಹಿತ್ಯದ ನೋಬೆಲ್ ಪಾರಿತೋಷಕವು ಆತನಿಗೆ ಕೊಡಲ್ಪಟ್ಟಿತು.

ಅದಕ್ಕೇ ನಾನು ಹೇಳುವುದು;—ಜ್ಯೂಲಿಯಸ್ ಸೀಸರ್‌ನ ಗೋತ್ರ ಅವನದು ವಿದ್ಯಾರಣ್ಯರ ಪುನರವತಾರ ಆದರೆ ಅದು ಬ್ರಿಟನ್ನಿನಲ್ಲಿ :—ನಮ್ಮ ವಿದ್ಯಾರಣ್ಯರೇ ಅಲ್ಲಿ ಅವತರಿಸಿ. ಈಗ ಮಹಾ ಪ್ರಸ್ಥಾನವನ್ನು ಹೊಂದಿದ್ದಾರೆ. ಆದುದರಿಂದ ನಾವೂ ತರ್ಪಣ ಕೊಡಬೇಕು. ಕೊಡುವಾಗ ಆ ದೇಶದವರ ತರಹಾನೇ ಕೊಡೋಣ, ಗಂಟಲಿಗೂ ಹಿತ " ಅಂದ ಕೊರವ.

ಪೆಂಗು ಪೆಂಗಾಗಿ ಏನೇನನ್ನೋ ಹೇಳುತ್ತಾನೆ ಕೊರವ. ಆದರೆ ಅವನ ಹುಚ್ಚಿನಲ್ಲೂ ರೀತಿ ಇರುತ್ತೆ. ಅಮಲಿನಲ್ಲೂ ಸತ್ಯ ಇರುತ್ತೆ, ಅದಕ್ಕೇ ಈ ರೀತಿ ಅವನು ಹೇಳಿದಾಗ ಅದನ್ನೊಪ್ಪಿ, ನಾವೆಲ್ಲರೂ ಆ ಮಹಾನ್ ಅವತಾರಿಗೆ ತರ್ಪಣ ಬಿಟ್ಟೆವು,

ಕೈಗೆ ಎಟುಕದ ಹೆಣ್ಣು

ಎಷ್ಟು ಸರಳವಾದ ಶೀರ್ಷಿಕೆ : 'ಕೈಗೆ ಎಟುಕದ ಹೆಣ್ಣು' ! ಹಾಗೆಯೇ ಅರ್ಥ ಗರ್ಭಿತವಾಗಿಯೂ ಇದೆ. ಆ ಹೆಣ್ಣು ಈ ಇವನ ಕೈಗೆ ಎಟುಕುವುದಲ್ಲ. ಅದರ ಎತ್ತರ ಹೆಚ್ಚು. ಆ ಹೆಣ್ಣು, ಉಚ್ಚ ; ಇವನು ನೀಚ ! ಮತ್ತು ಅವರಿಬ್ಬರ ಬಗೆಗೆ ಯಾವ ವಿಧವಾದ ದುರಪವಾದಗಳಿಗೂ ಅವಕಾಶವಿಲ್ಲ. ಅವಳನ್ನು ಎಟುಕಿಸಿಕೊಳ್ಳಲು ಅವನು ಪಟ್ಟ ಯತ್ನಗಳು ಜಗಜ್ಜಾಹೀರಾಗಿದ್ದರೂ ಇರಬಹುದು ; ಅವಳು ಅದನ್ನು ಗಮನಿಸದೇ ಹೋಗಿರಬಹುದು. ಇತ್ಯಾದಿ ಇತ್ಯಾದಿ. ವಿವರಣೆಯನ್ನು ಹೆಚ್ಚಾಗಿ ಲಂಬಿಸಲು ನಾವು ಯತ್ನಿಸುವುದಿಲ್ಲ. ಯಾರಿಗೆತಾನೇ ಇದೆಲ್ಲಾ ತಿಳಿದಿಲ್ಲ. ಪಾಯಸ, ದೋಸೆ, ಕಿತ್ತಲೆ ಹಣ್ಣು ಮತ್ತು ಮಾವನ ಹೆಣ್ಣು (ಮಗಳು), ಇವುಗಳ ವಿನಃ ಇನ್ನಾವುದೂ ಜನಸಾಮಾನ್ಯರಿಗೆ ತಿಳಿದಿರುವ ಸಂಭವವಿಲ್ಲ.

ಇಂತಹ ಉತ್ತಮವಾದ ಶೀರ್ಷಿಕೆಯನ್ನು ತನ್ನ ಏಕಮಾತ್ರ, ಪ್ರಪ್ರಥಮ ಕೃತಿಗೆ ಆಯ್ದುಕೊಂಡ ಸುಕೃತಶಾಲಿಯ ಕಥೆಯೇ ಇದು.

ಕೆಲವೊಂದು ತಾಂತ್ರಿಕ ಕಾರಣಗಳಿಗಾಗಿ ಈ ಕಥೆಯ ನಾಯಕನ ಹೆಸರನ್ನು ನಾವು ತಿಳಿಸುವಂತಿಲ್ಲ. ಮುಂದೆ ಎಂದಾದರೂ ಆ ಸತ್ಯ ಹೊರಬೀಳುವ ಸ್ಥಿತಿ ಬರಬಹುದು. ಅಂದಿನವರೆಗೆ ಅವನನ್ನು ಕಾಟನೆಂಬ ಹೆಸರಿನಿಂದಲೇ ಕರೆಯಬೇಕು. ಹೆಸರು ಅಂಕಿತವಲ್ಲದಿದ್ದರೂ ಅನ್ವರ್ಥ.

ಈ ಘಟನಾವಳಿ ಆರಂಭವಾಗುವ ಹೊತ್ತಿಗಾಗಲೇ ಕಾಟನು 'ಕೈಗೆಟುಕದ ಹೆಣ್ಣನ್ನು' ಕಂಡು, ಪ್ರೀತಿಸಿ, ಒದೆ ತಿಂದು, ವಿಫಲ ಪ್ರೇಮಿಯಾಗಿ, ಭಗ್ನ ಹೃದಯ ನಾಗಿದ್ದಾನೆ. ಭಗ್ನ ಹೃದಯನಾದ ಕಾಟ, ಗುಮಾಸ್ತೆಯಾಗಿ P.W.D. ಗೆ ಸೇರಿ, ಸಾಕಷ್ಟು ಹಣಗಳಿಸಿ, ಅದರ ಹಮ್ಮಿನಿಂದ ಕೆಲಸವನ್ನು ಬಿಟ್ಟುಬಿಟ್ಟ. ಪ್ರೇಮಕ್ಕೂ ಹಣಕ್ಕೂ ದೂರ ; ಪ್ರೇಮಿಯಾದವನು ಬಿಲ್ ಬರೆಯಲು ಒಪ್ಪುವುದಿಲ್ಲ ; ಅಲ್ಲದೆ ಲೋಕವೇ ತಿಳಿದಂತೆ ಹಣವನ್ನು ಯಾರು ಬೇಕಾದರೂ ದುಡಿಯಬಲ್ಲರು.

ಉಚ್ಚ ಧ್ಯೇಯಾದರ್ಶಗಳುಳ್ಳವನು ಹಣದ ದಾಸನಲ್ಲ.

ಪ್ರೇಮವು ಜೀವನದ ಪರಮಾದರ್ಶ. ಅದರಲ್ಲಿ ಸಫಲತೆಯನ್ನು ಗಳಿಸಲು ಸಾಧ್ಯವಾಗದಿದ್ದವನು ದೇಶಸೇವೆಗಾಗಿ ತನ್ನ ಬಾಳನ್ನು ಮುಡುಪಿಡುತ್ತಾನೆ. ಆದುದ ರಿಂದ ನಿಸ್ವಾರ್ಥದೇಶಸೇವೆ ಮಾಡಲೆಂದು ಹಿಂದೀ ಪ್ರಚಾರ ಕಾರ್ಯವನ್ನು ಆರಂಭಿಸಿದ.

'ಕಾಟ ಹಿಂದೀ ಮಂದಿರ'

ಮುಗಿಲು ಹಳ್ಳಿ

(ಪ್ರೊ॥ ಕಾಟಪ್ಪ)

ಇಲ್ಲಿ ಎಲ್ಲಾ ವಿಧವಾದ ಹಿಂದೀ ಪ್ರಚಾರ ಮಾಡಲ್ಪಡುತ್ತೆ

ಮೇಲ್ಕಂಡಂತೆ ಮುಗಿಲುಹಳ್ಳಿಯ ಹತ್ತೀಪೇಟೆಯಲ್ಲಿ ಬೋರ್ಡು ನೇತುಹಾಕಿ ಕಾಟನು ತನ್ನ ದೇಶಸೇವೆಯನ್ನು ಆರಂಭಿಸಿಯೇ ಬಿಟ್ಟ. ತನ್ನ ಹೃದಯಾಂತರಾಳ ದಲ್ಲಿದ್ದ ಅದಮ್ಯವಾದ ಪ್ರೇಮವನ್ನು ಅವನು ಮರೆಯಲು ಸಾಧ್ಯವಾಗಲಿಲ್ಲ.

ಮತ್ತೆ ಸೆಪ್ಟಂಬರ್ ಬಂತು. ಕಾಟ ಹಿಂದೀ ಮಂದಿರಕ್ಕೆ ಹೆಚ್ಚು ವಿದ್ಯಾರ್ಥಿಗಳು ಸೇರಲಿಲ್ಲ. ಭಾರತೀಯರಿಗೆ ನಿಜಕ್ಕೂ ಹಿಂದಿಯ ಪ್ರಚಾರ ಬೇಕಿಲ್ಲವೆಂದು ಕಾಟ ಚಿಂತಿಸಿದ.

ಮಾಗಿ ಮುಗಿದು ಮೂಡಗಾಳಿ ರೊಯ್ಯೋ ಎನ್ನಲಾರಂಭಿಸಿತು. ಮುಗಿಲು ಹಳ್ಳಿಯ ಬೇರೆ ಬೇರೆ ಹಿಂದೀ ಪ್ರಚಾರಕರು ಕುರಿ ಹಿಂಡಿನಂತೆ ಹುಡುಗ, ಹುಡುಗಿ ಯರನ್ನು ಜಮಾಯಿಸಿ ದೇಶಸೇವೆ ಮಾಡುತ್ತಿದ್ದರು. ಕಾಟ ಹಿಂದೀ ಮಂದಿರವು ಕನ್ನಡಮ್ಮನ ಗುಡಿಯಂತೆ ಬಿಕ್ಕೋ ಎನ್ನುತ್ತಿತ್ತು.

ಕಾಟ ಒಂದು ನಿರ್ಧಾರಕ್ಕೆ ಬಂದ: ಸದ್ಯದಲ್ಲೇ ಬರಲಿರುವ ಫೆಬ್ರುವರಿ ಪರೀಕ್ಷೆಯನ್ನು ಮುಗಿಸಿ ತಾನು ಹಿಂದೀ ಪ್ರಚಾರಕ್ಕೆ ತಿಲಾಂಜಲಿ ಕೊಡಬೇಕು.

ಚಳಿಗಾಲದ ಒಂದು ಸಂಜೆ. ಮಧ್ಯಾಹ್ನ ಕೆಟ್ಟ ಧಗೆಯೇನೋ ಎನ್ನಿಸುತ್ತಿದ್ದರೂ ಕೊರೆಯುವ ಚಳಿಗಾಳಿಗೆ ಸೂರ್ಯನ ಕಾವು ಆರಿ ಹೋಗಿತ್ತು, ಆದಷ್ಟು ಬೇಗ ಮನೆ ಸೇರಿಕೊಳ್ಳೋಣವೆಂದು ಸೂರ್ಯ ಚಿಂತಿಸುತ್ತಿರಬೇಕು. ಮೈಯೊಳಗಿನಿಂದ ನಡುಕವೇಳುತ್ತಿತ್ತು. ಪಾರಕ್ಕೆ ಬಂದಿದ್ದ ಒಂದೆರಡು ಚಿಳ್ಳೆಪಿಳ್ಳೆಗಳನ್ನು ಕಾಟ ಹೊರಕ್ಕೆ ನೂಕಿದ. ಕರಿಯ ಉಲನ್ ಪ್ಯಾಂಟ್, ನೀಲಿ ಟೆರಿಲೀನ್ ಬುಷ್‌ಷರಟು ಪಕ್ಕದಲ್ಲೇ ಇದ್ದ 'ಕೂದಲು ಕತ್ತರಿಸುವ ಅಂಗಡಿ'ಗೆ ಹೋಗಿ ಷೇವ್ ಮಾಡಿಸಿಕೊಂಡ. ತಲವಾರ್ ಕಟ್ ಮೀಸೆಯಮೇಲೆ ಕೈಯಾಡಿಸುತ್ತಾ ಬಂದು, ಬೀದಿಯ ತುದಿಗಿದ್ದ ಧರ್ಮಾರ್ಥ ನೀರಿನ ತೊಟ್ಟಿಯಲ್ಲಿ ಮುಖ ತೊಳೆದುಕೊಂಡ. ಕರ್ಚೀಫಿನಿಂದ ಮುಖ ಒರೆಸಿಕೊಂಡು ಗಡಗಡ ನಡುಗುತ್ತಾ Full Flavour Coffee ರೆಸ್ಟುರಾಂಟಿನ ಅಟ್ಟ ಹತ್ತಿದ.

ಹತ್ತೀ ಪೇಟೆಯಲ್ಲಿ ಮೂಡಗಾಳಿಯ ಪ್ರಭಾವ ಬಹು ಜೋರಾಗಿತ್ತು. ಕಾಟ ಕುರ್ಚಿಯಮೇಲೆ ಕುಳಿತುಕೊಳ್ಳುವ ಸಮಯಕ್ಕೆ ಸರಿಯಾಗಿ, ಪಕ್ಕದ ಮನೆಯ ಮೂರನೆಯ ಅಂತಸ್ತಿನಲ್ಲಿ ವಾಸವಾಗಿದ್ದ ಮಾರವಾಡಿಗಳು ಸುರಿದ ಮುಸುರೆ ನೀರು

ಗಾಳಿಗೆ ಸಿಡಿದು ಅವನ ಮುಖಕ್ಕೆ ಮುಸುಕಿತು. ಅವರನ್ನು ಬಾಯಿಗೆ ಬಂದಹಾಗೆ ಬೈಯುತ್ತಾ, ಕೋಣೆಯ ಇನ್ನೊಂದು ಮೂಲೆಗೆ ಹೋಗಿ ಕುಳಿತು ಕಾಫಿಗೆ ಆರ್ಡರು ಕೊಟ್ಟ. ಧೂಳು, ಸೇಂಗಾ ಹೊಟ್ಟು, ತರಗೆಲೆಗಳು, ಗುಬ್ಬಿ ಪುಕ್ಕಗಳು, ಗಾಳಿಯಲ್ಲಿ ತೇಲಿಬಂದು ಅವನ ಮುಖಕ್ಕೆ ಬಡಿಯುತ್ತಲೇ ಇದ್ದವು. ಮುಗಿಲು ಹಳ್ಳಿ ಮುನಿಸಿ ಪಾಲಿಟಿಯ ಕೀರ್ತಿ ಸೌರಭವೋ ಎನ್ನುವಂತೆ ಚರಂಡಿಯ ನಾತ ಮೂಗಿಗೆ ಬಡಿಯುತ್ತಿತ್ತು.

ಮಾಣಿ, ಕಾಫಿಯ ಬಟ್ಟಲನ್ನು ತಂದಿಟ್ಟ. ಕಾಟ ಅದನ್ನೆತ್ತಿಕೊಂಡು ಕುಡಿಯ ಬೇಕು ಎನ್ನುವಷ್ಟರಲ್ಲಿ ಅದರಲ್ಲಿ ಒಂದು ಬ್ಯಾಡ್ಮಿಂಟನ್ ಚೆಂಡು ಬಂದು ಬಿದ್ದಿತು. ಚಂಡಮಾರುತವೇ ಬೀಸುತ್ತಿರಬೇಕು ಎಂದುಕೊಂಡ ಅವನು.

ಲ್ಯೋ, ಯೇನೋ ಅದು ಪ್ರಾರಬ್ಧ ಶೆನಿನನ...ನೇ !' ಎಂದು ಅವನು ಮಾಣಿಯನ್ನು ಶಪಿಸಿದ.

ಪಕ್ಕದ ಮನೆಯ ಮಹಡಿಯ ಮೇಲಿನಿಂದ "Ball please" ಎಂದು ಹುಡುಗಿಯೊಬ್ಬಳು ಕೂಗಿದಳು.

ಕಾಟ ತಲೆಯೆತ್ತಿ ನೋಡಿ ಸುಸ್ತು ಹೊಡೆದ.

"ಕಾಫಿಗೆ ಬಿದ್ದತೇ" ಎಂದು ಕೂಗಿದ.

ಕಾಟ ಸುಸ್ತು ಹೊಡೆದ ಎಂದು ಹೇಳಿತಷ್ಟೇ. ಅದಕ್ಕೆ ಕಾರಣಗಳಿಲ್ಲದಿರಲಿಲ್ಲ. ಫುಲ್ ಫ್ಲೇವರ್ ಕಾಫೀ ಭವನದ ಮಹಡಿಯ ಹಿಂಭಾಗಕ್ಕೆ ಹೊಂದಿಕೊಂಡಂತೆ ಇನ್ನೊಂದು ಮನೆಯ ಮೇಲ್ಮಾಳಿಗೆ ಇದೆ. ಆ ಮಹಡಿಯ ಮೇಲೆ, ಲಂಗಧಾವಳಿಯುಟ್ಟ ಹರೆಯದ ಎರಡು ಜಡೆ ಯುವತಿಯೊಬ್ಬಳು, ತನ್ನಂತೆಯೇ ವೇಷ ಧರಿಸಿದ ಇನ್ನೊಬ್ಬಳೊಡನೆ ಬ್ಯಾಡ್ಮಿಂಟನ್ ಆಡುತ್ತಿದ್ದಳು.

ಆ ಮಹಡಿಯು ಕಾನ್ವೆಂಟ್, ಮಹಿಳಾ ಸಮಾಜ, ರಿಕ್ರಿಯೇಷನ್ ಸೆಂಟರ್ ಅಥವಾ ಬೊಂಬಾಯಿ ಲಂಡನ್ನುಗಳಲ್ಲಿ ಒಂದೂ ಅಲ್ಲ. ಕಾಟನ ಬಾಲ್ಯದ ಗೆಳತಿಯರೆಲ್ಲರೂ ಕಳೆ ತೆಗೆಯುವುದು, ಎಮ್ಮೆ ಕಾಯುವುದು, ಕುರಿಗಳನ್ನು ಅರೈಯುವುದು ಮೊದಲಾದುವುಗಳಲ್ಲೇ ನಿರತರಾಗಿದ್ದವರು, ಅವನ ಕಾಲೇಜು ದಿನಗಳ ಸಂಗಾತಿಯರ ಗಮನವೂ ಗೃಹಕೃತ್ಯಕ್ಕೆ ಸಂಬಂಧಿಸಿದ್ದೇ ಆಗಿತ್ತು.

ಇವರೇಕೆ ಓದಲು ಬರುತ್ತಾರೆ ಎಂದು ಅವನಿಗೆ ಆಶ್ಚರ್ಯವಾಗುತ್ತಿತ್ತು. ಹೀಗಿರುವಾಗ ಮುಗಿಲುಹಳ್ಳಿಯ ಹತ್ತೀಪೇಟೆ ಇಷ್ಟು ಆಧುನಿಕವಾದುದು ಅವನಿಗೆ ಅತಿ ಸೋಜಿಗದ ಸಂಗತಿಯಾಗಿ ಕಂಡಿತು.

"Cottonpet has proceeded very much further !" ಎಂದುಕೊಂಡ.

" Ball Please " ಎಂದಳು ತರುಣಿ.

" fallen in coffee, the ball" ಎಂದ ಕಾಟ.

ಮಾಣಿ ತಂದ ಇನ್ನೊಂದು ಕಾಫಿಯನ್ನು ಗುಟುಕರಿಸಿ

" ಯಾರಲೇ ಇವ್ರು ?" ಎಂದ.

" ಆಯ್, ನಿಮಿಗ್ಗೊತ್ತಿಲ್ವೇ ? " ಎಂದು ಮಾಣಿ ಕೇಳಿದ,

' ಇಲ್ಲ '. ಎಂದ ಕಾಟ ಮೇಲು ಮಾಳಿಗೆಯ ಕಡೆಗೆ ನೋಡಿದ, ಧಾವಳಿಯ ಹುಡುಗಿಯರಿಬ್ಬರೂ ಕಣ್ಮರೆಯಾಗಿದ್ದರು,

ಕಾಟ ನಿಟ್ಟುಸಿರು ಬಿಟ್ಟ. ನನಗೆ ಇಂತಹ ಶಿಷ್ಯೆಯರಿದ್ದಿದ್ದರೆ ! ಎಂದುಕೊಂಡ, ಸೂರ್ಯನಾಗಲೇ ಮುಳುಗಿದ್ದ.

(ಸಶೇಷ)

—ಅ, ರಾ. ಸೇ.

ಪೌಲಸ್ತ್ಯನೆಂದೊಬ್ಬ ದಿಕ್ಪಾಲಕ
ಹೊತ್ತಿದ್ದ ಜಿಪುಣನೆಂಬ ಪದಕ
ಕಾಸು ಕಾಸು ಜೋಡಿ ಹೂಡಿ
ತಾಸು ತಾಸು ಎಣಿಸಿ ಕೂಡಿ
ಕೊನೆಗೆ ಲೆಕ್ಕ ಸಿಗದೆ ಆದ " ವಂಚಕ "

* * * *

ಸಿದ್ದಯ್ಯನೆಂಬೊಬ್ಬ ನೂರಲಿರುವನು
ಸೀಮೆಯೆಣ್ಣೆಯನ್ನು ಮಾರಿ ಬಾಳುತಿರುವನು
ಒಂದು ದಿನ ಬೀಡಿ ಹಚ್ಚಿ
ಬುಡ್ಡಿ ಯೆಣ್ಣೆ ಹಾಕ ಹೋದ.
ಸಿದ್ದಯ್ಯನೆಂಬೊಬ್ಬ ನೂರಲಿದ್ದನು.

ನಮ್ಮ ಮಂತ್ರಿಯ ದಶಾವತಾರ

(ಅಂಬಿಕಾತನಯದತ್ತರು ಕ್ಷಮಿಸುವರೆಂಬ ಧೈರ್ಯದಿಂದ)

ಅಂಬೇಸಿಡರ್‌ನೊಳಗೆ ಈಸುವುದು,
ನೋಡಿದಿರಾ ಮೀನಾವತಾರ !
ಮನುಜ ಕುಲೋದ್ಧಾರಕ ನಮ್ಮ ಮಂತ್ರಿ !

ಅರ್ಜಿಗಳನ್ನೆಲ್ಲ ಬೆನ್ನಲಿ ಹೊತ್ತಿರುವುದು,
ನೋಡಿದಿರಾ ಕೂರ್ಮಾವತಾರ !
ಪ್ರಜಾರಾಜ್ಯಕಾಧಾರಸ್ಥಂಭ ನಮ್ಮ ಮಂತ್ರಿ !

ವಿರೋಧ ಪಕ್ಷದಮೇಲೆರಗುವುದು
ನೋಡಿದಿರಾ ವರಾಹ ಸ್ವಾಮಿ !
ಹೂಂಕರಿಸುವ ನಮ್ಮ ಮಂತ್ರಿ !

ಯಾವ ಕಂಬದಲಿ ನೆನೆದರೆ ಅಲ್ಲಿ ಅವತರಿಸುವ
ವಿಚಿತ್ರ ನೃಸಿಂಹಸ್ವಾಮಿ !
ಭಕ್ತಜನ ಪರಿಪಾಲಕ ನಮ್ಮ ಮಂತ್ರಿ !

ಮೈಕಾಸುರನನು ಸಂಹರಿಸಿದ
ನವ ಪರಶುರಾಮನ ಕಂಡಿರಾ !
ಭಾಷಣ ಭೂಷಣ ನಮ್ಮ ಮಂತ್ರಿ !

ರಜತ ಕಿರೀಟವ ಧರಿಸುವ !
ಕೈಯಲಿ ಗುಲಾಬಿಯ ಪಿಡಿದು
ಸತ್ಯ ಅಹಿಂಸೆಗಳ ಬೋಧಿಸುವ !
ಕಂಡಿರಾ ರಾಮಾವತಾರ ನಮ್ಮ ಮಂತ್ರಿ !

ಕಂಡಿರಾ ಶ್ವೇತಾಂಬರ ಮೂರ್ತಿ ! ಚಿಂತೆಯನು ಗೆದ್ದ
ಬುದ್ಧ ದೇವ !
ಬಿಸಲಗುದುರೆಯನೇರುವ ಕಲ್ಕಿ !
ಅಣುಮೋಹವ ಕೊಂದು ಸಹಬಾಳ್ವೆಯ
ಪ್ರತಿಷ್ಠಾಪಿಸುವ ನಮ್ಮ ಮಂತ್ರಿ !

—ಹಾ. ರಾ.

ಕಳಿಸ್ಬೇಡಿ ಟಿಟೀಕೇನ-ಫ್ರಾನ್ಸಿಗೆ

ಮುಪ್ಪಿನ ವಯಸ್ಸು ಟಿ. ಟಿ. ಕೇಗೆ. ಆಸೆ ಆಗಬಹುದು ಫ್ರಾನ್ಸಿಗೆ ಹೋಗೋಣ ಅಂತ. ಆರ್ಥಿಕ ಮಂತ್ರೀಗೆ ಆಸೆ ಆದರೆ ಪ್ಯಾರಿಸ್ ತನಕ ಹೋಗೋದು ಏನು ಕಷ್ಟ!

ಎಲ್ಲಾದರೂ ಅಲ್ಲಿಗೆ ಹೋಗಿಬಿಟ್ಟರೆ, ಅಲ್ಲಿನ ತೆರಿಗೆ ವಿಧಾನಗಳನ್ನು ನೋಡಿ ಬಿಟ್ಟರೆ, ಇವರಿಗೂ ಪಿತ್ತ ಕೆರಳಬಹುದು. ಮೊದಲೇ ಶಿವಲೀಲೆ ಹಿಡಿದವರ ತರಹ ಎಗರಾಡ್ತಾ ಇದಾರೆ. ಅದರಮೇಲೆ ಪಿತ್ತ ಕೆರಳಿದರೆ?

ಅಂತಹುದೇನಪ್ಪ ಫ್ರಾನ್ಸಿನಲ್ಲಿ ತೆರಿಗೆ ವಿಧಾನ? ಅಂತ ಕೇಳಬಹುದು.

ಏನು ಅಂತ ಹೇಳಲಿ? ಈ ಪತ್ರಿಕೇಲಿ ಅದನ್ನೆಲ್ಲ ಬಹಿರಂಗವಾಗಿ ವಿವರಿಸಿದರೆ, ಮುಸಲಾ ಟಿ. ಟಿ. ಕೇಗೆ ಈ ಪತ್ರಿಕೇನ ಓದೋ ಬುದ್ಧಿ ಬಂದರೆ, ಆಗ ಅನಾಹುತ ಆಗೇ ಬಿಡುತ್ತಲ್ಲ! ಆದರೆ ಧೈರ್ಯ! ಸಚಿವರ್‍ಯಾರಾದರೂ ಜಾಣ ಪತ್ರಿಕೇಗಳನ್ನು ಓದುವ ಸಂಭವ ಬಲು ಬಲು ಕಡಿಮೆ. ಆದ್ದರಿಂದ ವಿವರಿಸ್ತೀನಿ ಕೇಳಿ.

ಫ್ರಾನ್ಸಿನಲ್ಲಿ ಅಧಿಕ ವರಮಾನ ತೆರಿಗೆ ಹಾಕುತ್ತಾರಲ್ಲಾ; ಅದು ವಾರ್ಷಿಕ ವರಮಾನದ ಮೇಲೆ ಮಾತ್ರ ಅಲ್ಲ. ನಾಗರಿಕನ ಶ್ರೀಮಂತಿಕೆಯ ಹೊರ ಗುರುತು ಗಳನ್ನು ನೋಡಿ, ಅವುಗಳ ಮೇಲೆ ಇಷ್ಟಿಷ್ಟು ಅಂತ ತೆರಿಗೆ ಬಡಾಯಿಸ್ತಾರೆ. ಉದಾಹರಣೆಗೆ, ೧ ಮೋಟಾರ್ ಕಾರ್ ಇಟ್ಟುಕೊಂಡಿದ್ದರೆ, ಅದು ಐದು ವರ್ಷದ ಬಾಲ್ಯಕ್ಕಿಂತ ಕಡಿಮೆಯಾಗಿದ್ದರೆ, ಆಗ ಮೋಟಾರಿನ ಒಂದೊಂದು ಅಶ್ವ ಶಕ್ತಿಗೂ ೭೫,೦೦೦ ಫ್ರಾಂಕ್ ಅಂತ ಲೆಕ್ಕ ಹಾಕಿ, ಈ ಮೊತ್ತವನ್ನು ಆ ದುರದೃಷ್ಟಿಯ ಆಸ್ತಿಗೆ ಸೇರಿಸಿಬಿಡುತ್ತಾರೆ. ಅಷ್ಟು ಹಣದ ಮೇಲೆ ತೆರಿಗೆ ಜಡಿಯುತ್ತಾರೆ. ಮನೆ ಕೆಲಸಕ್ಕೆ ಅಂತ ಒಂದು ಹೆಂಗಸನ್ನು ನೇಮಿಸಿಕೊಂಡಿದ್ದರೆ, ಆರು ಲಕ್ಷ ಫ್ರಾಂಕ್—ಅಂದರೆ ೬ ಬರೆದು ಅದರ ಮುಂದೆ ಐದು ಸೊನ್ನೆಗಳನ್ನು ಬರೆದಷ್ಟು—ಅಷ್ಟು ದೊಡ್ಡ ಮೊತ್ತ ವನ್ನು ಆ ಪಾಪಿಯ ಆಸ್ತಿಯ ಜತೆಗೆ ಜಂಟಿಮಾಡಿ, ಒಟ್ಟು ಹಣದ ಮೇಲೆ ಸುಂಕದ ಬರೆ ಎಳೆದು ಬಿಡುತ್ತಾರೆ.

ಗಂಡು ಆಳನ್ನು ಕೆಲಸಕ್ಕೆ ಇಟ್ಟುಕೊಂಡಿದ್ದರೆ, ೯ ಲಕ್ಷ ಫ್ರಾಂಕ್‌ಗಳನ್ನು ಆಸ್ತಿಯಮೇಲೆ ಸೇರಿಸಿಬಿಡ್ತಾರೆ. ಜೂಜಿನ ಕುದುರೆ ಇಟ್ಟುಕೊಂಡಿದ್ದರೆ ಕೇವಲ ೯೦ ಲಕ್ಷ ಫ್ರಾಂಕ್ ಸೇರಿಸುತ್ತಾರೆ. ಅಂದರೆ ಒಂದು ಜೂಜಿನ ಕುದುರೆ ಹತ್ತು ಹೆಣ್ಣು ಆಳಿಗೆ ಸಮಾನ. ಎರಡು ಹೆಣ್ಣು ಆಳುಗಳನ್ನು ನೇಮಿಸಿಕೊಂಡರೆ ಮೊದಲ ನೇಯವಳು ೬ ಲಕ್ಷ, ಆದರೆ ಎರಡನೆಯವಳು ೯ ಲಕ್ಷ ಅಂತ ಲೆಕ್ಕ ಹಾಕ್ತಾರೆ.

ಇದನ್ನೆಲ್ಲಾ ನೋಡಿಬಿಟ್ಟು, ನಮ್ಮ ಟಿ. ಟಿ. ಕೆ ನಮ್ಮೂರಿನಲ್ಲೂ ಅದ್ಧಿಯ ಬಾಹ್ಯಕಾಣುವ ಶ್ರೀಮಂತಿಕೆಯ ಮೇಲೆ ತೆರಿಗೆ ಬಡಿದರೆ :— ಉದಾ : ಸರಿಗೆ ರುಮಾಲು ಸುತ್ತಿದವರಿಗೆ ಹತ್ತು ರೂಪಾಯಿ ತೆರಿಗೆ, ಹೆಂಡತಿ ವಜ್ರದ ಓಲೆ ಹಾಕಿಕೊಂಡಿದ್ದರೆ ಇಪ್ಪತ್ತು ರೂಪಾಯಿ. ಮಗ ಟ್ರಾನ್ಸಿಸ್ಟರ್ ಹಿಡಿದುಕೊಂಡು ಓಡಾಡಿದರೆ ಮೂವತ್ತು ರೂಪಾಯಿ, ಮನೆಯ ಮಗಳು ಚಾನಲ್ ನಂಬರ್ ೫ ನ್ನ ಸಿಂಪಿಸಿಕೊಂಡಿದ್ದರೆ ನಲವತ್ತು ರೂಪಾಯಿ, ಮನೆ ಮುದುಕಿ ಕೈಗಡಿಯಾರ ಕಟ್ಟಿಕೊಂಡಿದ್ದರೆ ಐವತ್ತು ರೂಪಾಯಿ :—

ಇತ್ಯಾದಿ ಮನೆ, ಮನೆಯವರ ಶ್ರೀಮಂತಿಕೆಯ ಚಿಹ್ನೆಗಳಮೇಲೆ ತೆರಿಗೆ ಹಾಕಿದರೆ—

ಹಾಗೂ ಸಾಲಮಾಡಿ ಮನೆ ಕಟ್ಟಿಸಿದ್ದರೂ ಕೂಡ, ಮನೆ, ನಾಲ್ಕು ಚದರ ಇದೆ ನಾಲ್ವತ್ತು ರೂಪಾಯಿ ಬೇಕು ಅಂತ ಕಾರ್ಪೊರೇಷನ್ನಿನವರೇ ಕೇಳೋವಾಗ ಟಿ.ಟಿ.ಕೆ, ಮನೇಗೆ ನಾನ್ನೂರು ಶ್ರೀಮಂತ ತೆರಿಗೆ ಅಂತ ವಿಧಿಸಬಹುದಲ್ಲ.

ಕುದುರೆ ಗಾಡಿ ಇಟ್ಟುಕೊಂಡಿದಿ, ಪೀಕು, ಇನ್ನೂರು ರೂಪಾಯಿ ತೆರಿಗೇನ ಅಂತ ಜಟ್ಕಾ ಸಾಬಿಯನ್ನು ಅಮರಿಕೊಳ್ಳಬಹುದಲ್ಲ !

ಸ್ಕೂಟರ್‌ಮೇಲೆ ಹೋಗ್ತಿ, ಹಿಂದೆ ನೈಲಾನ್ ಸೆರಗು ಹಾರುತ್ತಾ ಇರುತ್ತೆ ಅಂದಮೇಲೆ ಮಜದಮೇಲೆ ತೆರಿಗೆ ಕೊಡು, ತತ್ತಾ ಐನೂರು ಅನ್ನಬಹುದಲ್ಲ.

ಓವಲ್‌ಟಿನ್ ಡಬ್ಬ ಎರಡು ಕೊಂಡಿದ್ದೀ, ಅಂದರೆ ಶ್ರೀಮಂತನೇ ಇರಬೇಕು, ತೆರು ಇನ್ನು ಇಪ್ಪತ್ತು ಅಂತ ಅನ್ನಬಹುದಲ್ಲ.

ಸ್ವಂತ ಮೋಟಾರ್ ಇಟ್ಟುಕೊಂಡವನು ಈ ಗಲಾಟೇಲಿ ನೆಗೆದುಬಿದ್ದು ಹೋಗ್ತಾನೆ. ಮನೇಲಿ ಎರಡು ಹೆಣ್ಣು ಆಳುಗಳನ್ನು ಇಟ್ಟುಕೊಂಡಿರುವವನ್ನು ದಿಟವಾಗಿಯೂ ಅವರುಗಳನ್ನು " ಇಟ್ಟುಕೊಳ್ಳುವುದೇ " ಸಸ್ತ ಅಂತ ಅಂದುಕೊಳ್ಳ ಬಹುದು.

ಓಟಿನ ಭಿಕ್ಷೆಯವರ ಗಲಾಟೆ ತಪ್ಪಿಸಿಕೊಳ್ಳುಕ್ಕೆ ಅಂತ ನಾಯಿ ಸಾಕಿದರೆ ಕಂತ್ರಿ ನಾಯಿಗೆ ಹತ್ತು, ಆಲ್ಸೇಷಿಯನ್‌ಗೆ ನೂರು, ಗ್ರೇಟ್ ಡೇನ್‌ಗೆ ಇನ್ನೂರು ಅಂತ ನಾಯಿನ ಜಾತಕ ಮತ್ತು ವಜನ್ ನೋಡಿ, ಮಾಲೀಕನಿಗೆ ತೆರಿಗೆ ವಿಧಿಸಿದರೂ ವಿಧಿಸಬಹುದು.

ಅಂದಮೇಲೆ ಸಮಾಜಕ್ಕೆ ಸಮಾಜವೇ ಕಳಚಿಕೊಳ್ಳಬಹುದು. ನಮ್ಮ ಮಾತೃ ಭೂಮಿಯ ಸುಭದ್ರತೆಗೆ ಧಕ್ಕೆ ಬೀಳಬಹುದು. ಏಕೆಂದರೆ ಸಮಾಜ ಕುಸಿದು ಬಿದ್ದರೆ, ನೆರೆಹೊರೆಯ ಶತ್ರುಗಳು ನುಗ್ಗಿ ಬಂದು ಮೆಟ್ಟಿಕೊಳ್ಳಬಹುದು.

ಅದಕ್ಕೇ ಹೇಳಿದ್ದು ಟಿ. ಟಿ. ಕೇನ ಖಂಡಿತ ಪ್ಲಾನ್ನಿನ ಹತ್ತಿರಕೂಡ ಸುಳಿಯುಕ್ಕೆ ಬಿಡಬಾರದು ಅಂತ.

ನಮ್ಮೂರಿನ ಹೆಸರು

ಮಾಸ್ತಿಯವರ 'ಕೊಂಬು' ಎಂಬ ಕವನ ಓದಿದ್ದೀರಾ? ಅದರಲ್ಲಿ ಕನ್ನಡ ನಾಡಿನ ಘುದ್ದು ಮುದ್ದಾದ ಊರುಗಳ ಹೆಸರಿನ ಒಂದು ಪಟ್ಟಿಯೇ ಇದೆ. ಸಿರಿಯೂರು, ಅಮೃತೂರು, ಕಿರಿಜಾಜಿಯೂರು, ತಿಂಗಳೂರು, ಎಸಳೂರು-ಇತ್ಯಾದಿ. ಆದರೆ ಕೊಡವೂರು ಎಂಬ ನಮ್ಮೂರಿನ ಹೆಸರನ್ನು ನೀವು ಕೇಳಿದ್ದಿರೋ ಇಲ್ಲವೋ. ಆರೂರು, ಎಲ್ಲೂರು, ಪೆರಡೂರು, ಸಾಂತೂರುಗಳಂತೆ ಕೊಡವೂರು ಕೂಡ ಒಂದೂರು ಅಷ್ಟೆ. ಆದರೆ ಕೊಡವೂರು ಎಂಬ ಹೆಸರು ಹೇಗೆ ಬಂತು ಎಂದು ಕೇಳಿದರೆ, ಅದು ಕ್ರೋಡ ಮುನಿ ತಪಸ್ಸು ಮಾಡುತ್ತಿದ್ದ ಸ್ಥಳವಾದ್ದರಿಂದ ಕೊಡವೂರಾಯಿತು ಎಂದು ಬಲು ಹೆಮ್ಮೆಯಿಂದ ಹೇಳುತ್ತಾರೆ. ಸ್ಥಳ ಪುರಾಣ ಹಾಗನ್ನುತ್ತದಂತೆ. ಕ್ರೋಡ ಮುನಿಯಿದ್ದ ಊರು ಕೊಡವೂರು ಎಂದಷ್ಟೇ ತೃಪ್ತಿಪಟ್ಟುಕೊಂಡು ಇರಬಹುದಿತ್ತೋ ಏನೋ, ಆದರೆ ಹಾಗಾಗಲಿಲ್ಲ.

ಊರಿನ ಹೆಸರನ್ನು ಬದಲಾಯಿಸುವ ಚಾಳಿ ದೇಶದಾದ್ಯಂತ ಪ್ರಬಲವಾದಾಗ, ನಮ್ಮೂರಿಗೂ ಆ ಸುಧಾರಣೆಯ ಗಾಳಿ ಬೀಸಿತು. ಆ ವೇಳೆಗೆ ಒಂದು ಪೋಸ್ಟಾಫೀಸನ್ನು ಬೇರೆ ತೆರೆದರು. ಅದೇ ಒಂದು ನಿಮಿತ್ತವಾಯಿತು ಹೆಸರಿನ ಬದಲಾವಣೆಗೆ. ಪೋಸ್ಟಾಫೀಸಿಗೆ ಅಂಚೆ ಇಲಾಖೆಯವರು ಹೆಸರಿಡುವ ಪ್ರಮೇಯ ಬಂದಾಗ, ಹೊಸ ಹೆಸರಿಗಾಗಿ ಹಂಬಲಿಸುತ್ತಿದ್ದ ನಮ್ಮೂರ ಪ್ರಭೃತಿಗಳು 'ಕ್ರೋಡಾಶ್ರಮ' ಇರಲಿ ಎಂದರು.

ಊರಿನ ಹೆಸರನ್ನು ಬದಲಾಯಿಸಿಕೊಂಡಿದ್ದರಿಂದ ಯಾರಿಗಾದರೂ ಅನುಕೂಲ ವಾಯಿತೋ ಏನೋ ಗೊತ್ತಿಲ್ಲ. ಆದರೆ ಹಲವರಿಗೆ ಊರ ಹೆಸರನ್ನು ಬರೆಯುವಾಗ ತಂಟೆಗಿಟ್ಟುಕೊಂಡಿತು. ಊರಿನ ಹೆಸರು ಬದಲಾಯಿಸಿದಾಗಲೆಲ್ಲ ಹೀಗೇನೇ ಅನ್ನಿ. ಸರಳವಾಗಿದ್ದ ಕೊಡವೂರು ಕ್ರೋಡಾಶ್ರಮವಾದ್ದರಿಂದ ಅನೇಕರಿಗೆ ಊರ ಹೆಸರನ್ನು ಉಚ್ಚರಿಸುವುದೇ ಕಷ್ಟವೆನಿಸಿತು. ಸಂಪಾದನೆಗಾಗಿ ದೂರದ ಊರುಗಳಿಗೆ ಹೋಗಿರುವ ಅಲ್ಪ ಶಿಕ್ಷಣವುಳ್ಳ ಮಂದಿ ಊರಿಗೆ ಬರೆಯುವ ಪತ್ರಗಳ ವಿಳಾಸ ಬರೆಯುವಾಗ ಬಲು ಪೇಚಿಗೆ ಸಿಕ್ಕಿದರು. ಅವರಲ್ಲನೇಕರು ಮನೆಗೆ 'ಮಣೆ', ಇಲಿಗೆ 'ಇಳಿ' ಕೋಳಿಗೆ 'ಕೋಲಿ' ಎಂದು ಉಚ್ಚರಿಸುವವರು. ಅಂಥವರು ಈ 'ಕ್ರೋಡಾಶ್ರಮ' ಎಂಬ ಕಬ್ಬಿಣದ ಕಡಲೆಯನ್ನು ತಡೆದುಕೊಳ್ಳುವುದುಂಟೆ? ತಮ್ಮಿಂದಾದಷ್ಟು ಪ್ರಯತ್ನಿಸಿದರು. ತಮಗೆ ತೋಚಿದಂತೆ ಬರೆಯತೊಡಗಿದರು, ಬರೆಸತೊಡಗಿದರು.

ಬರೆಸುವುದು ಎಂದೆನೆ ? ಹೌದು. ಮುಂಬಯಿಯಂಥ ನಗರಗಳಲ್ಲಿ ಅರಿಯದವರಿಗೆ ಕಾಗದಗಳ ವಿಳಾಸಗಳನ್ನೂ ಮನಿಯಾರ್ಡರ್ ಮೊದಲಾದ ಫಾರ್ಮುಗಳನ್ನೂ ಬರೆದುಕೊಡುವ ಮಂದಿ ಪೋಸ್ಟಾಫೀಸುಗಳ ವಠಾರದಲ್ಲೇ ಇರುತ್ತಾರೆ. ಅವರು, ಹೇಳುವವರ ಬಾಯಿಯಿಂದ ವಿಳಾಸ ಹೊರಡುವ ಮೊದಲೇ ಬರೆದು ಮುಗಿಸುವಷ್ಟು ಗಡಿಬಿಡಿಯವರು. ಅಂಥವರು ಬರೆಯುವಾಗ ಕ್ರೋಡಾಶ್ರಮದ ಅವಸ್ಥೆ ಏನಾಗಬೇಕು? ಅದು 'ಕರೋಡಾಶ್ರಮ' ಕರಡಾಶ್ರಮ, ಕೊರ್ಡಶರ್ಮ, ಎಂಬಿತ್ಯಾದಿ ರೂಪ ತಾಳಿದ್ದರಲ್ಲಿ ಆಶ್ಚರ್ಯವಿಲ್ಲ. ಹೆಚ್ಚಿನವರು ಕ್ರೋಡಾಶ್ರಮ ಸರಿಕಾಣದೆ 'ಕುರುಡಾಶ್ರಮ' ಅಥವಾ 'ಕುರುಡರ ಆಶ್ರಮ' ಎಂದು ಸ್ಪಷ್ಟವಾಗಿ ಬರೆಯತೊಡಗಿದರು,

'ಕುರುಡರ ಆಶ್ರಮ' ಎಂದು ಬರೆಯುವವರು ಎಷ್ಟು ಮಂದಿಯೆಂದರೆ ಮೊನ್ನೆ ಮೊನ್ನೆ ಒಬ್ಬಾತ ನಮ್ಮಲ್ಲಿಗೆ 'ಇಲ್ಲಿ ಡಾಕ್ಟರ್ ಮೋದಿಯವರ ಆಶ್ರಮ ಎಲ್ಲಿ ?' ಎಂದು ಕೇಳಿಕೊಂಡು ಬಂದಿದ್ದ.

ಮಿತ್ರನೊಬ್ಬ 'ಕುರುಡರ ಆಶ್ರಮವೇ ಸರಿ ನಮ್ಮೂರು' ಎನ್ನುತ್ತಾನೆ. ಏಕೆಂದರೆ, 'ಜಗತ್ತು ಬದಲಾಯಿಸಿದರೂ ನಮ್ಮೂರಿನ ಜನ ಕಣ್ಣು ತೆರೆದಿಲ್ಲ' ಎಂದು ಆವನ ಆತಂಕ ಆವನಿಗೆ ಯಾವ ವಿಷಯದಲ್ಲಿ ಅಸಮಾಧಾನವೋ ಯಾರಿಗೆ ಗೊತ್ತು!

ಇನ್ನು, ಇದು ಕ್ರೋಧಾಶ್ರಮವೇ ಸರಿ ಎನ್ನುತ್ತಾನೆ ಮಾವನ ಮನೆಗೆ ಬಂದ ಅಳಿಯನೊಬ್ಬ. ಅವನ ಮಾವ ಎಂದರೆ ದೂರ್ವಾಸರ ಅಪರಾವತಾರ. ಅಂದಮೇಲೆ ಆ ಅಳಿಯನ ಮಟ್ಟಿಗೆ ನಮ್ಮೂರು ಕ್ರೋಧಾಶ್ರಮವೇ ಸರಿ.

ಕೆಲವರು ವಿಳಾಸದಲ್ಲಿ 'ಕ್ರೀಡಾಶ್ರಮ' ಎಂದೂ ಬರೆದರು. ಅದೂ ಸರಿಯೆ. ಕ್ರೀಡೆಯೆಂದರೆ ನಮ್ಮೂರಿನಲ್ಲಿ ಕ್ರಿಕೆಟ್ಟು ಫುಟ್‌ಬಾಲಿಲ್ಲ. ಎಲ್ಲಿನೋಡಿದರೂ ಇಸ್ಪೀಟಿನ ಗುಂಪುಗಳೇ. ಇಸ್ಪೀಟಾಟಕ್ಕೆ ಕುಳಿತರೆ ನಮ್ಮೂರ ಜನ ಕೊರಡುಗಳೇ. ಅವರಿಗೆ ಅನ್ನಬೇಡ, ನೀರುಬೇಡ, ಜಗತ್ತೇ ಬೇಡ. ಆದ್ದರಿಂದ ಇದು ಕೊರಡಾಶ್ರಮವೇ ಸರಿ ಎನ್ನುತ್ತಾನೆ ಒಬ್ಬ ಸಿನಿಕ.

ಯಾವುದೇನೇ ಇರಲಿ ನಮ್ಮೂರಿಗೆ ಆಶ್ರಮ ಎಂಬ ಬಿರುದಂತೂ ಬಲವಾಗಿ ಅಂಟಿತು. ಊರೂರು ಅಲೆಯುತ್ತ ಬರುವ ಗಡ್ಡದ ಬಾವಾಜಿಗಳು ನಮ್ಮಲ್ಲಿಗೆ ಬಂದು 'ಸೋಮೀಜೀಕ ಆಶ್ರಮ್ ಕಿಧರ್ ಹೈ?' ಎಂದು ವಿಚಾರಿಸುವುದುಂಟು. ಯಾರಾದರೂ ತುಂಟರಿದ್ದರೆ ಕೂಡಲೆ ಹೇಳುತ್ತಾರೆ "ಸೋಮೀಜಿ ಕೈಲಾಸಕ್ಕೆ ಹೋದರು, ಬೇಕಿದ್ದರೆ ನೀನೇ ಇಲ್ಲಿ ತಳವೂರಿ ಆಶ್ರಮ ಕಟ್ಟು. ನಮ್ಮ ಕ್ರೋಡಾಶ್ರಮಕ್ಕೆ ನಿನ್ನಂಥ ಕೊರಡೊಂದು ಹೆಚ್ಚಲ್ಲ" ಎಂದು.

ನಮ್ಮೂರಿಗೆ ಕೊಡವೂರು ಎಂದು ಹೆಸರಿರುವಾಗ ಇಂಥ ಚೇಷ್ಟೆಗಳಿಗೆಲ್ಲ ಅವಕಾಶವಿರಲಿಲ್ಲ. ಊರಿನ ಹೆಸರು ಭರ್ಜರಿಯಾಗಿರಲೆಂದು ಯಾವ ಗಳಿಗೆಯಲ್ಲಿ ಕ್ರೋಡಾಶ್ರಮ ಎಂದು ಬದಲಾಯಿಸಿದೆವೋ ಪ್ರಾರಂಭವಾಯಿತು ನೋಡಿ ಕೀಟಲೆ.

ಇರಲಿ. ಊರಿಗೆ ಆಶ್ರಮ ಎಂದು ಹೆಸರಿಟ್ಟೆವಲ್ಲ. ಆಶ್ರಮ ಎಂದೊಡನೆ ಮನಸ್ಸಿಗೆ ಬರುವ ಪವಿತ್ರವಾತಾವರಣವನ್ನು ನಮ್ಮೂರಿನಲ್ಲಿ ಕಾಣುವಂತಾಯಿತೆ ಎಂದರೆ ನೇರವಾದ ಉತ್ತರ ಹೇಳುವ ಧೈರ್ಯವಿಲ್ಲ ನಮಗೆ. ಲಫಂಗನೋ, ಸಮಾಜ ದ್ರೋಹಿಯೋ, ಏನಕೇನ ಪ್ರಕಾರೇಣ, ಭಕ್ತಿ ಶಿರೋಮಣಿ, ಲೋಕಸೇವಾ ಸಕ್ತ, ಎಂಬ ಬಿರುದನ್ನು ಗಳಿಸಿ ತನ್ನ ಹೆಸರಿಗಂಟಿಸಿಕೊಂಡನೆನ್ನಿ. ಆ ಬಿರುದು ಬಂದ ಮೇಲಾದರೂ ಆತ ತನ್ನನ್ನು ಸುಧಾರಿಸಿಕೊಂಡರೆ ಚೆನ್ನಲ್ಲವೆ? ಆದರೆ ಅದು ಅಸಾಧ್ಯ ವಲ್ಲದಿದ್ದರೂ ದುಃ ಸಾಧ್ಯ. ಹಾಗೇ ಆಯಿತು ನಮ್ಮ ಪಾಡು. ಕ್ರೋಡ ಮುನಿಯ ತಪೋ ಭೂಮಿ ನಮ್ಮೂರು ಎಂದು ನಮಗೆ ಹೆಮ್ಮೆ. ಆದರೆ ಹಿಂದೊಮ್ಮೆ ಆಶ್ರಮ ವಾಗಿದ್ದ ಈ ಪವಿತ್ರ ಸ್ಥಳದಲ್ಲಿರಬೇಕಾದ ವಾತಾವರಣ ಮನೋವೃತ್ತಿ, ನಡವಳಿಕೆ ಇವುಗಳನ್ನು ನಾವು ರೂಪಿಸಿಕೊಂಡೆವೆ? ಇಲ್ಲ. ಊರನ್ನು ಆಶ್ರಮ ಎಂದು ಕರೆದು ಕೊಳ್ಳುವುದು ಮಾತ್ರ. ಹಾಗೆ ನೋಡಿದರೆ ಹೆಜ್ಜೆ ಹೆಜ್ಜೆಗೆ ನಮ್ಮ ದೇಶದಲ್ಲಿ ಸಿಗುತ್ತವೆ ರಾಮನಡಿಯಿಟ್ಟತಾಣ, ಪಾಂಡವರು ರಾತ್ರಿ ಬೆಳಗಾಗುವುದರೊಳಗೆ ಕಟ್ಟಿದ ಗುಡಿಗಳು, ಅಸಂಖ್ಯಾತ ಮುನಿಗಳು ತಪಸ್ಸು ಮಾಡಿದ ಸ್ಥಳಗಳು. ಆದರೆ ಅದೆಲ್ಲ ಹಿಂದಿನ ಕತೆ. ಈಗ ಏನು?

ಈಗ ಹೆಸರು ಮಾತ್ರ. ಹೆಮ್ಮೆಯಿಂದ ಹೇಳಿಕೊಳ್ಳುವುದಕ್ಕೆ ಮಾತ್ರ ನಮ್ಮದು ಕೊಡವೂರಲ್ಲ ಕ್ರೋಡಾಶ್ರಮ!

—ರಾಮಿ.

ಕುಸುಮ ಎಂಬ ಚೆಲುವೆ ಊರಲಿರುವಳು
ಹೆಸರಿನಂತೆ ಅವಳು ಕೂಡ ಹಸನು ಮಾಲು
ಮಖಮಲ್ ರವಿಕೆ ತೊಡಲು ಎಷ್ಟು ಚೆನ್ನ ಎನಲಾಗ
ರವಿಕೆಗಿಂತನಾನು ನುಣುಪು ಎಂದು ಬಿಟ್ಟಳು.

* * * *

ಜಮೀನ್ದಾರ್ ಜವರಯ್ಯ ಚೆಂದುಳ್ಳಿ ಬ್ರಹ್ಮಚಾರಿ
ಮದುವೆಗೆಂದು ಬಹಳ ಜನರು ಕಾಡುತ್ತಿದ್ದರು.
ಬೇಸರಾಗಿ ಕಡೆಗೆ ಅವನು
ಟಿಕೆಟ್ಟು ಲಾಟರಿ ಹಾಕಿ
ಗೆದ್ದ ಹುಡುಗಿ ಕೈಯ ನಾನು ಹಿಡಿವೆ ಎಂದನು.

ಚಿದಂಬರನ ಗಜೇಂದ್ರಾಸವ

ಬರೆದವರು ;

ಕೇ ಫ

★

ಬಹಳ ದಿನಗಳ ಮೇಲೆ ಮಲ್ಹಾರಿರಾಯರು, ವಿರಾಟ ಭವನದಲ್ಲಿ ತಮ್ಮ ಮಾಮೂಲು ಕೋಣೆಯಲ್ಲಿ, ಮಾಮೂಲು ದಿಕ್ಕಿನಲ್ಲಿ, ಮಾಮೂಲು ಕುರ್ಚಿಯಲ್ಲಿ, ತಮ್ಮ ಮಾಮೂಲು ಖಾರದ ಗೋಡಂಬಿ, ಸ್ಟ್ರಾಂಗ್ ಕಾಫಿಗಳನ್ನು ಅನುಭವಿಸುತ್ತ ಕುಳಿತಿದ್ದರು.

"ಈ ರೀತಿ ನಾವೆಲ್ಲರೂ ಸೇರುತ್ತೇವೋ ಇಲ್ಲವೋ ಅಂತ ನನಗೆ ತುಂಬಾ ಯೋಚನೆಯಾಗಿತ್ತು!" ಅಂದರು—ಭಾಳೇಕಾಯಿಬಜೆ.

"ರಾಯರ ಸವಾರಿ ಯಾವ ಕಡೆ ಹೋಗಿತ್ತೋ ?" ಅಂತ ಓಂಪುಡಿ ವಿಚಾರಿಸಿದರು ಸೂಕ್ಷ್ಮವಾಗಿ.

"ರಾಯರು ಇಷ್ಟು ದಿನ ಇಲ್ಲಿ ನಮ್ಮ ಮಧ್ಯೆ ಇಲ್ಲದೆ ಇದ್ದದ್ದು, ಈ ವಿರಾಟ ಭವನ ವಿರಾಟಭವನವಿದ್ದಹಾಗೇ ಇರಲಿಲ್ಲ" ಅಂದ ಪರಶು.

ಪರಶು—ನಮ್ಮೆಲ್ಲರ ಅಭಿಪ್ರಾಯವನ್ನೂ ಒಂದೇ ಮಾತಿನಲ್ಲಿ ಬಹಳ ನಾಜೋಕಾಗಿ ಹೇಳಿಬಿಟ್ಟ !

ಮಲ್ಹಾರಿರಾಯರು, ಬಾಯಲ್ಲಿದ್ದ ಖಾರದ ಗೋಡಂಬಿಯನ್ನು ಅಗಿದು, ಒಂದು ಗುಟುಕು ಸ್ಟ್ರಾಂಗ್ ಕಾಫಿಯಿಂದ ಅದನ್ನು ನುಂಗಿ, ಸಹಜವಾದ ಅನುಕಂಪದಿಂದ ಹೇಳಿದರು—"ನೀವೆಲ್ಲ ನನ್ನ ಮೇಲೆ ಇಷ್ಟೊಂದು ಮಮತೆ ಇಟ್ಟಿರುವುದಕ್ಕಾಗಿ ನಾನು ನಿಮಗೆಲ್ಲಾ ತುಂಬಾ ಕೃತಜ್ಞ. ಹಾರಾಡುವ ಪಕ್ಷಿಗಳು ಯಾವುದೋ ಮರದ ಮೇಲೆ ತುಸ ಕಾಲ ಕುಳಿತು, ಪುನಃ ಹಾರಿಹೋಗುವಂತೆ, ನಾವು ಈ ಪ್ರಪಂಚದಲ್ಲಿರುವ ತುಸ ಕಾಲದಲ್ಲಿ, ಈ ತರಹದ ಮಮತೆಯೇ ಅಲ್ಲವೆ ನಮ್ಮನ್ನೆಲ್ಲಾ ಒಟ್ಟು ಕೂಡಿಸುವುದು ?"

ನಾವೆಲ್ಲರೂ ತಲೆ ತೂಗಿದೆವು. ವಿರಾಟಭವನದ ಚರ್ಚೆ ಇಷ್ಟು ಉನ್ನತ ಮಟ್ಟಕ್ಕೆ ಏರಿದುದನ್ನು ಕಂಡು ನಮಗೆಲ್ಲರಿಗೂ ತೃಪ್ತಿಯಾಯ್ತು.

ನಾನು ಈಗ್ಗೆ ಮೂರು ವಾರಗಳಿಂದ ಬೊಂಬಾಯಿನಲ್ಲಿದ್ದೆ. ಅಲ್ಲಿ ನನ್ನ ಅಣ್ಣನ ಮಗ ಶಾಂತಾರಾಮ ಮತ್ತು ಅವನ ಹೆಂಡತಿ ಕುಮುದ—ಅವರ ಚಿಕ್ಕ ಸಂಸಾರದಲ್ಲಿ ಅತಿಥಿಯಾಗಿದ್ದೆ."

"ಶಾಂತಾರಾಮ ಅಂದರೆ—ಹಿಂದೆ ತನ್ನ ಬಿಕ್ಕಲು ಉಪದ್ರವವನ್ನು ತನ್ನ ಸ್ವಪ್ರಯತ್ನದಿಂದ ಗೆದ್ದ ಹುಡುಗನಲ್ಲವೆ ?" ಅಂತ ಖಾರಾಬೂಂದಿ ಕೇಳಿದರು.

"ಅದೇ ಶಾಂತರಾಮನೆ! ಅಂದರೆ—ಎಂದೋ ತಮಗೆಲ್ಲಾ ನಾನು ಶಾಂತಾ ರಾಮನ ವಿಷಯ ಹೇಳಿರಬೇಕು!" ಮಲ್ಹಾರಿರಾಯರು ಆಶ್ಚರ್ಯದಿಂದ ಕೇಳಿದರು.

"ಓಹೋ—ಹೇಳಿದ್ದೀರಿ. ಅದೇ ನೋಡಿ—ಯಾರೋ ವೈದ್ಯನ ಸಲಹೆ ಮೇರೆ—ಈ ಶಾಂತಾರಾಮ. ಒಂದು ರೈಲು ಡಬ್ಬಿ ಹತ್ತಿ, ಅಲ್ಲಿ ಏಕಾಂಗಿಯಾಗಿದ್ದ ಮಹಿಳೆಯ ಕೈಲಿ ಸಿಕ್ಕಿಹಾಕಿಕೊಂಡು......"

ಓಂಪುಡಿಯ ಈ ಅಚಾತುರ್ಯ ಮಾತುಗಳನ್ನು ಬಾಳೇಕಾಯಿ ಬಜಿ ತುಂಡು ಮಾಡಿದರು.

"ಅದೆಲ್ಲಾ ಆಗಿ ಹೋದ ವಿಷಯ ಬಿಡಿ!...ರಾಯರೇ—ಈಗ ಶಾಂತರಾಮ ಹೇಗಿದ್ದಾನೆ! ಅವನ ಸಂಸಾರ ಹೇಗಿದೆ? ಆ ದಂಪತಿಗಳಿಗೆ ಚಕ್ರಬಂದ ಸ್ಪರ್ಧೆಯಲ್ಲಿ ಏನಾದರೂ ಬಹುಮಾನ ಬಂತೋ ಹೇಗೆ—ಹೇಳಿ ?" ಅಂದರು.

"ನನ್ನ ಅಣ್ಣನ ಮಗನ ವಿಷಯದಲ್ಲಿ ನೀವೆಲ್ಲಾ ಇಷ್ಟು ಆಸಕ್ತಿಯಿಂದಿರುವಾಗ, ವಿಷಯವನ್ನು ಪೂರ್ತಿ ನಾನು ಹೇಳಲೇಬೇಕು. ಪರಶು—ಕಾಫಿ ಆರೇಹೋಯ್ತು. ಇನ್ನೊಂದು ಲೋಟ ಕಾಫಿ, ಬಿಸಿಯಾಗಿ, ಸ್ಟ್ರಾಂಗಾಗಿ ಮಾಡಿ ತಾ." ಅನ್ನುತ್ತಾ ಮಲ್ಹಾರಿರಾಯರು ನಮ್ಮ ಕಡೆ ತಿರುಗಿದರು.

ನನ್ನ ಅಣ್ಣನ ಮಗ ಶಾಂತಾರಾಮ (ಮಲ್ಹಾರಿರಾಯರು ಮುಂದುವರಿದರು) ಕುಮುದಳನ್ನು ಮದುವೆಯಾದ ಮೇಲೆ ತಕ್ಕಮಟ್ಟಿಗೆ ಇದೇ ಊರಲ್ಲೇ ಸುಖವಾಗಿ ದ್ದರೂ, ಬಾಂಬೇ ಅಂತ ದೊಡ್ಡ ಶಹರು ಸೇರಿ ತುಂಬಾ ದುಡ್ಡು ಸಂಪಾದನೆ ಮಾಡ ಬೇಕು ಅಂತ ಆಸೆಪಟ್ಟ. ತನಗೆ ವಿದ್ಯೆ ಇತ್ತು. ಬಿಕ್ಕಲು ಹೋಗಿತ್ತು. ಆದರೂ. ಶಾಂತಾರಾಮ ಅಂಜುಬುರುಕ. ಯಾರನ್ನಾದರೂ ಹೋಗಿ ಭೇಟಿಮಾಡಬೇಕಾದರೆ, ಅವನಿಗೆ ವಿಪರೀತ ಭಯ. ಹಾಗಾಗಿ ಅವನ ಆಸೆ-- ಆಸೆಯಾಗೇ ಉಳಿದಿತ್ತು. ಆಗಲೇ ಅವನ ಹೆಂಡತಿ ಕುಮುದ—ಜಾಣೆ ಹುಡುಗಿ ಹೇಳಿದಳು—"ಹೋಗಿ ನಿಮ್ಮ ಚಿಕ್ಕಪ್ಪ ಚಿದಂಬರ ರಾಯರನ್ನು ನೋಡಿ"—ಅಂತ. ನನ್ನ ತಮ್ಮ ಚಿದಂಬರ ಅಂದರೆ— ಪ್ರಸಿದ್ಧ ಸಿದ್ಧೌಷಧಿಗಳ ನಿರ್ಮಾತ. ಇಗೋ—ಈ ಚಿದಂಬರಾಂಜನದ ನಿರ್ಮಾತ. (ತಮ್ಮ ಕಿಸೆಯಿಂದ ಒಂದು ಡಬ್ಬಿ ತೆಗೆದು ತೋರಿಸಿದರು.) ಆದರೆ ಶಾಂತಾರಾಮನಿಗೆ ತನ್ನ ಚಿಕ್ಕಪ್ಪನೆದುರಿಗೆ ತನ್ನ ಗೋಳು ಹೇಳಿಕೊಳ್ಳುವುದಕ್ಕೂ ಸಂಕೋಚ. ಹಾಗಾಗಿ ಕುಮುದ ಶಹಣೆ ಹುಡುಗಿ. ಚಿದಂಬರನ ಹೆಂಡತಿ ವಸಂತಳ ಹತ್ತಿರ ತನ್ನ ಗಂಡನ ಮನೋವಿಕಾರದ ಬಗ್ಗೆ ಹೇಳಿಕೊಂಡಳು. ವಸಂತಳಿಗೆ ಈ ಶಾಂತಾರಾಮ ಕುಮುದ ಅಂದರೆ ಪಂಚಪ್ರಾಣ. ತನ್ನ ಗಂಡ ಅದೇತಾನೇ ತಯಾರಿಸಿಟ್ಟಿದ್ದ "ಗಜೇಂದ್ರಾಸವ" ಅಂತ ನಾಮಕರಣ ಮಾಡಿದ್ದ, ಒಂದು ಕಷಾಯದ ಸ್ಯಾಂಪಲ್ ಬಾಟಲನ್ನು ಶಾಂತಾ ರಾಮನಿಗಾಗಿ ಕುಮುದಳ ಕೈಲಿ ಕೊಟ್ಟುಕಳುಹಿಸಿದಳು

ಶಾಂತಾರಾಮನಿಗೆ ತನ್ನ ಚಿಕ್ಕಪ್ಪನ ಔಷಧಿಗಳಲ್ಲಿ ಅಷ್ಟಾಗಿ ನಂಬಿಕೆ ಇಲ್ಲದಿದ್ದರೂ ತನ್ನ ಕುಮುದಳ ಕೈಯಿಂದ ಬಂದಿತ್ತಾದ್ದರಿಂದ, "ಗಜೇಂದ್ರಾಸವ"ವನ್ನು ಸೇವಿಸಲು ಶುರುಮಾಡಿದ. ಆ ಕಷಾಯದ ಸ್ಯಾಂಪಲ್ ಬಾಟ್ಲಿಯ ಮೇಲೆ ಯಾವ ವಿಧವಾದ ಸೂಚನೆಯೂ ಇಲ್ಲದ್ದರಿಂದ—ಹಾಗೂ ಗಜೇಂದ್ರಾಸವ ಸುಮಾರಾಗಿ ರುಚಿಕರವೂ ಇದ್ದದ್ದರಿಂದ ಅದನ್ನು ಬೆಳಿಗ್ಗೆ ಅರ್ಧಲೋಟ, ಮಧ್ಯಾಹ್ನ ಅರ್ಧಲೋಟ, ರಾತ್ರಿ ಅರ್ಧ ಲೋಟ ಪ್ರಮಾಣದಲ್ಲಿ ಸೇವಿಸಿದ. ಕೇವಲ ಮೂರನೆಯ ಬಾರಿ ಸೇವಿಸಿದ ಮೇಲೆ ಕಷಾಯದ ಪರಿಣಾಮ ತಿಳಿಯಿತು. ಅಂದು ಮುಂಜಾನೆಯ ಕಾಫಿ ತಡ ವಾಯಿತೆಂದು ಶಾಂತಾರಾಮ ತನ್ನ ಮಡದಿಯ ಮೇಲೆ ಕಂಡಾಪಟ್ಟೆ ಕೂಗಾಡಿದ.

"ಕುಮುದಾ! ಇದೇನು ಮನೆಯೋ ಅಥವಾ ಪ್ರವಾಸಿ ಮಂದಿರವೋ? ಮಟಮಟ ಮಧ್ಯಾಹ್ನವಾದರೂ ಮುಂಜಾನೆಯ ಕಾಫಿ ಪತ್ತೆ ಇಲ್ಲ? ಕುಮುದಾ?"

ಕುಮುದಳಿಗೆ ತುಂಬಾ ಆಶ್ಚರ್ಯವಾಯ್ತು. ಎಂದೂ ಶಾಂತಾರಾಮ ಈ ರೀತಿ ವರ್ತಿಸಿರಲಿಲ್ಲ.

"ಇದೋ ಬಂದೇಂದ್ರೆ. ಒಂದೇ ಕ್ಷಣ." ಅಂದಳು.

"ನನಗೆ ನಿನ್ನ ಕ್ಷಣಗಳು ಬೇಡ. ಕಾಫಿಬೇಕು—ತಕ್ಷಣ! ಕುಮುದಾ!!" ಅಂತ ಅರಚಿದ ಶಾಂತಾರಾಮ.

ಕುಮುದ ಕಾಫಿ ತಂದುಕೊಟ್ಟಳು. ಶಾಂತಾರಾಮ ಕಾಫಿಯ ರುಚಿ ನೋಡಿದ.

"ಇದೇನು ಕಾಫಿಯೋ ಕಲಗಚ್ಚೋ?"—ಅನ್ನುತ್ತಾ ಮಿಕ್ಕ ಕಾಫಿಯನ್ನು ಕುಮುದಳ ಮುಖದ ಮೇಲೆ ಚೆಲ್ಲಿದ.

ಕುಮುದಳಿಗೆ ತುಂಬಾ ಗಾಬರಿಯಾಯ್ತು. ತನ್ನ ಗಂಡನನ್ನು ಯಾವುದೋ ದೆವ್ವ ಹಿಡಿದಿದೆ ಎಂದು ನೆನೆಸುವಷ್ಟು ಗಾಬರಿಯಾಯ್ತು. ಶಾಂತಾರಾಮ ತನ್ನ ಬೆಳಗಿನ ಸ್ನಾನಾದಿಗಳನ್ನು ಮುಗಿಸಿ, ಅರ್ಧ ಲೋಟ "ಗಜೇಂದ್ರಾಸವ" ಕುಡಿದು ಮನೆಯಿಂದ ಧಾವಿಸಿ ಹೊರಟ. ಮಧ್ಯಾಹ್ನದ ಸಮಯಕ್ಕೆ ಮನೆಗೆ ವಾಪಸು ಬಂದಾಗ ಶಾಂತಾರಾಮನ ಹಣೆಯ ಮೇಲೆ ಮೂರು ಕಡೆ ಪ್ಲಾಸ್ಟರ್ ಹಚ್ಚಿತ್ತು. ಎಡ ತೋಳು ಅರ್ಧಕ್ಕೆ ಮಡಿಸಿ, ಅದನ್ನು ತೂಗು ಬ್ಯಾಂಡೇಜಿನಲ್ಲಿ ಕಟ್ಟಿತ್ತು.

"ಕುಮುದಾ. ಇವತ್ತೇ ರಾತ್ರಿ ನಾನು ಬೊಂಬಾಯಿಗೆ ಪ್ರಯಾಣಮಾಡಬೇಕಾ ಗಿದೆ, ರಾತ್ರಿ ರೈಲಿಗೆ." ಅಂದ.

ಕುಮುದ ಸುಮ್ಮನಿದ್ದಳು. ಪಾಪ. ಆಕೆಗೆ ಗಂಡನೆದುರಿಗೆ ನಿಲ್ಲುವುದಕ್ಕೂ ಭಯ! ಶಾಂತಾರಾಮ ತನ್ನ ಕೋಟಿನ ಕಿಸೆಯಿಂದ ಒಂದು ಕಂತೆ ನೋಟುಗಳನ್ನು ಹೊರತೆಗೆದು ತನ್ನ ಮೇಜಿನಮೇಲಿಟ್ಟ.

"ನೋಡು—ಒಂದೂವರೆ ವರ್ಷದಿಂದ ನನಗೆ ಬರಬೇಕಾಗಿದ್ದ ಈ ದುಡ್ಡನ್ನು ಇವತ್ತು ವಸೂಲು ಮಾಡಿದ್ದೇನೆ ಆ ವೀರಭದ್ರಯ್ಯನಿಂದ! ಹಾಗೇ ಇವತ್ತು ಶೀನಿಯ

ಮೂಳೆ ಮುರಿದು ಬಂದಿದ್ದೇನೆ—ಮೂರು ಕಡೆ. ಇನ್ನು ಒಂದುವಾರದಲ್ಲಿ ನನ್ನ ದುಡ್ಡು ತಂದುಕೊಡದಿದ್ದರೆ ಅವನ ಚರ್ಮ ಸುಲೀತೇನೆ ಅಂತ ಆ ಮುಟ್ಠಾಳನಿಗೆ ಹೇಳಿಬಂದಿದ್ದೇನೆ. ಆಗೋ ಈ ಪೇಪರ್ ನೋಡು—ಬಾಂಬೇಲಿ ಒಂದು ಕಂಪನೀಲಿ ಒಂದು ಕೆಲಸ ಖಾಲಿ ಇದೆ. ಅದನ್ನು ಸಂಪಾದಿಸಿಕೊಂಡು ಬರ್ತೇನೆ. ಇನ್ನೊಂದು ವಾರದಲ್ಲಿ ಬಾಂಬೇಗೆ ಹೊರಡೋಕೆ ತಯಾರಾಗಿರು...ಏನು ಹೀಗೆ ನೋಡ್ತಾ ನಿಂತಿದ್ದಿ ಕುಮುದ ? ನಿಂದೇನೂ ಅಭ್ಯಂತರವಿಲ್ಲವಲ್ಲಾ ! "

" ಇಲ್ಲಾಂದ್ರೆ..." ಅಂದಳು ಕುಮುದ.

" ಅದೇ ಒಳ್ಳೇದು." ಅಂದ ಶಾಂತಾರಾಮು.

ಅಂದು ರಾತ್ರಿ ರೈಲಿನಲ್ಲಿ ಶಾಂತಾರಾಮು ಬಾಂಬೇಗೆ ಪ್ರಯಾಣ ಬೆಳೆಸಿದ. ಮರುದಿನ ಬೆಳಿಗ್ಗೆ ಕುಮುದ ನೇರವಾಗಿ ಚಿದಂಬರನ ಮನೆಗೆ ಹೋದಳು. ಅಲ್ಲಿ ವಸಂತಳ ಮುಂದೆ ಪುನಃ ತನ್ನ ಗಂಡನ ಸ್ಥಿತಿಯನ್ನು ವಿವರಿಸಿ ಗೋಳಿಟ್ಟಳು. ವಸಂತ ಚಿದಂಬರನಿಗೆ ನಡೆದ ವಿಷಯ ತಿಳಿಸಿದಳು.

ಚಿದಂಬರ ಒಂದೇ ಬಾರಿಗೆ ಉದ್ರೇಕಗೊಂಡ.

" ವಸಂತಾ, ನೀನು ಹೊಸ ಔಷಧಿಯನ್ನು ನನ್ನನ್ನು ಕೇಳದೆ ಆ ಪಿರಕಿ ಹುಡುಗನಿಗೆ ಏಕೆ ಕೊಟ್ಟೆ ? ಗಜೇಂದ್ರಾಸವವನ್ನು ಕೇವಲ ಬೇಟೆಗಳಲ್ಲಿ ಉಪ ಯೋಗಿಸುವ ಆನೆಗಳಿಗೆ ಮತ್ತು ಕೆಲವು ಸರ್ಕಸ್‌ಗಳಲ್ಲಿರೋ ಗಂಡು ಆನೆಗಳಿಗೆ ತಯಾರಿಸಿದ್ದು. ಕೆಲವು ವೇಳೆ ಈ ಆನೆಗಳು ಹುಲಿ ಚಿರತೆಗಳೆದುರು ನಿಲ್ಲಲು ಸಂಕೋಚ ಪಡುತ್ತವೆ. ಆ ತಾಪತ್ರಯ ನಿವಾರಿಸೋಕೆ ನಾನು ಗಜೇಂದ್ರಾಸವ ತಯಾರಿಸಿದೆ. ಮೂವತ್ತು ವಯಸ್ಸಿನ ಗಂಡು ಆನೆಗೆ ಒಂದು ಟೀ ಚಂಚ ಗಜೇಂ ದ್ರಾಸವ ದಿನಕ್ಕೆ ಒಂದೇಬಾರಿ ಅದರ ಆಹಾರದಲ್ಲಿ ಸೇವಿಸಿದರೆ ಸಾಕು ! ಅದು ಹೋಗಲಿ ಈ ನಿನ್ನ ನರಪೇತಲ ಎಷ್ಟು ಕುಡಿದಿದ್ದಾನೆ ? "

ಕುಮುದ ದಿಗ್ಭ್ರಾಂತಳಾದಳು.

" ಪ್ರಾಯಶಃ ಹೊತ್ತಿಗೆ ಅರ್ಧಲೋಟ "

ಇದನ್ನು ಕೇಳಿ ಚಿದಂಬರ ದಿಗ್ಭ್ರಾಂತನಾದ.

" ಭಗವಂತ ! ವಸಂತಿ !! ಕುಮುದ !! ಶುದ್ಧ ಅವಿವೇಕಿ ಹೆಣ್ಣುಗಳಾ ! ನಾಳೆಯೇ ಆ ಮುಟ್ಠಾಳ ಶಾಂತಾರಾಮು ಎಲ್ಲೇ ಇರಲಿ ತಾರುಮಾಡಿ ಪುನಃ ಆ ಕಷಾಯದ ಒಂದು ತೊಟ್ಟು ಕೂಡ ನಾಲಿಗೆಗೆ ಸೋಕಿಸದ ಹಾಗೆ ತಡೆಹಾಕಿ ! " ಅಂದ.

ಕುಮುದ ತನ್ನ ಗಂಡನ ಬಾಂಬೇ ಅಡ್ರೆಸ ತಿಳಿಯದೆ ಕಂಗಾಲಾದಳು. ಎಲ್ಲವನ್ನು ಭಗವಂತನ ಮೇಲೆ ಭಾರ ಹಾಕಿ ಸುಮ್ಮನಾದಳು. ಆರನೆಯ ದಿನ ಶಾಂತರಾಮು ನಿಂದ ಕಾಗದ ಬಂತು.

" ಪ್ರೀತಿಯ ಕುಮುದ, ಇಲ್ಲಿ ನನಗೆ ಒಂದು ದೊಡ್ಡ ಸಿಂಧಿ ವ್ಯಾಪಾರಿ ಸಂಸ್ಥೆಯಲ್ಲಿ ಕೆಲಸ ಸಿಕ್ಕಿದೆ. ತಿಂಗಳಿಗೆ ಐನೂರು ರೂಪಾಯಿ ಸಂಬಳದ ಕೆಲಸ. ಎರಡೂವರೆ ವರುಷಗಳಿಂದ ಈ ಸಂಸ್ಥೆಗೆ ಬರಬೇಕಾಗಿದ್ದ ಬಾಕಿ ಹಣ ನಾಲ್ಕು ಸಾವಿರ ರೂಪಾಯಿಗಳನ್ನು ಕೇವಲ ಅರ್ಧ ಘಂಟೆಯಲ್ಲಿ ವಸೂಲ್‌ಮಾಡಿ ತಂದು ಕೊಟ್ಟೆ. ನಮ್ಮ ಸೇಟ್ ಮಗನನ್ನು ಹೆದರಿಸುತ್ತಿದ್ದ ಒಬ್ಬ ಪಠಾಣನ ಮೀಶೆಯನ್ನು ಬುಡ ಸಮೇತ ಕಿತ್ತು ನಮ್ಮ ಮಗನ ಕೈಲಿ ಕೊಟ್ಟಿದ್ದೇನೆ. ಈ ಆಫೀಸಿನಲ್ಲಿ ಪ್ರತಿನಿತ್ಯ ಬಾಗಿಲಲ್ಲಿ ತೂಕಡಿಸುತ್ತ ಕುಳಿತಿರುತ್ತಿದ್ದ ಚೋಕ್ರನ ಬಲಗಡೆ ಕ್ಲಾವಿಕಲ್ ಮೂಳೆ ಮುರಿದಿದ್ದೇನೆ. ಅವನು ಬ್ಯಾಂಡೇಜಿನೊಂದಿಗೇ ಎಚ್ಚರದಿಂದ ಕೆಲಸ ಮಾಡುತ್ತಿದ್ದಾನೆ. ನನಗೆ ಬಿಟ್ಟಿ ಮನೆ ವಾಸಕ್ಕಾಗಿ ಕೊಟ್ಟಿದ್ದಾರೆ. ನಾಳಿದ್ದು ನಾನು ಬರುತ್ತೇನೆ. ಹೊರಡಲು ಸಿದ್ಧಳಾಗಿರು. ನಮ್ಮ ಸಾಮಾನುಗಳು ತಯಾರಾಗಿರಲಿ, ಜೊತೆಗೆ ವಸಂತ ಚಿಕ್ಕಮ್ಮನಿಗೆ ಹೇಳಿ ಒಂದು ಡಜನ್ ದೊಡ್ಡ ಸೈಜು ಗಜೇಂದ್ರಾಸವ ಟಾನಿಕ್ ರೆಡಿಯಾಗಿಟ್ಟಿರು. ಅಲ್ಲಿ ಬಂದು ಅದರ ಹಣ ಪಾವತಿ ಮಾಡುತ್ತೇನೆ. ಇಷ್ಟು ಜವಾಬ್ದಾರಿ ನಿನ್ನದು ನೆನಪಿರಲಿ. ನಿನ್ನವ ಶಾಂತಾರಾಮ "

ಮಲ್ಹಾರಿರಾಯರು ಒಂದು ಬಾರಿ ನಮ್ಮನ್ನೆಲ್ಲಾ ನೋಡಿ ಮುಗುಳು ನಗೆ ಬೀರಿದರು.

" ಹಾಗಾಗಿ ನಾನು ಬಾಂಬೇಲಿ ಆ ಪುಟ್ಟ ಸಂಸಾರದ ಅತಿಥಿಯಾಗಿದ್ದೆ. ನನ್ನ ಸೊಸೆ ಕುಮುದ ತುಂಬಾ ಆದರದಿಂದ ನನ್ನನ್ನು ಆರೈಕೆ ಮಾಡಿದಳು." ಅಂತ ಹೆಮ್ಮೆಯಿಂದ ಮುಕ್ತಾಯ ಮಾಡಿದರು.

ನಾವೆಲ್ಲಾ ಮಲ್ಹಾರಿರಾಯರ ಹೆಮ್ಮೆಯ ಬಗ್ಗೆ ಒಪ್ಪಿಗೆ ಸೂಚಿಸಿದೆವು.

ಪಕ್ಕದ ಮನೆ ಪಾತಕ್ಕ ನನ್ನ ಪಕ್ಕ ಕುಳಿತಳು
ಕಕ್ಕನ ಮನೆ ಹಬ್ಬದೂಟ ಕುಳಿತೆವಿಬ್ಬರೂ
ಅವಳ ಕರುಳು ಕೂಗುತಿತ್ತು
ಸಿಡಿಲು ಗುಡುಗು ಹೊಡೆದ ತೆರದಿ
ಎಲ್ಲರೂನೂ ನನ್ನ ನೋಡಿ ಕಣ್ಣ ಕಣ್ಣ ಬಿಟ್ಟರು !

ಓದುಗರ ಪತ್ರ.

"ಕೊರವಂಜಿ" ಸಂಪಾದಕರ ಸಮುಕ್ಷಮಕ್ಕೆ

ಸ್ವಾಮಿ,

"ಮದುವೆಯಾದ ಮೊದಲ ವರ್ಷ ಗಂಡ ಮಾತನಾಡುತ್ತಾನೆ ಹೆಂಡತಿ ಕೇಳು ತ್ತಾಳೆ, ಎರಡನೆ ವರ್ಷ ಹೆಂಡತಿ ಮಾತಾಡುತ್ತಾಳೆ ಗಂಡ ಕೇಳುತ್ತಾನೆ, ಮೂರನೆ ವರ್ಷ ಇಬ್ಬರೂ ಮಾತಾಡುತ್ತಾರೆ, ನೆರೆಯವರು ಕೇಳುತ್ತಾರೆ" ಎಂಬ ನಾಣ್ಣುಡಿ ಯನ್ನು ನಿಜವೆಂದು ನಂಬಿದ್ದ ನಾನು ನನ್ನ ಸ್ನೇಹಿತ ಸುಬ್ಬಯ್ಯ ಗೃಹಸ್ಥನಾಗಿ ಸಂಸಾರ ಹೂಡಿದಮೇಲೆ, ಆ ಗಾದೆ ಹಸೀ ಸುಳ್ಳೆಂಬ ತೀರ್ಮಾನಕ್ಕೆ ಬರಬೇಕಾಯಿತು.

ಸನ್‌ಸಾವಿರದೊಂಬೈನೂರ ಅರವತ್ತನೇ ಇಸವಿ ಜುಲೈನಲ್ಲಿ ಸುಬ್ಬಯ್ಯ ಗೃಹಸ್ಥ ನಾಗಿ ಖಳೆಹೀನನಾದುದು ಸರಿಯಷ್ಟೆ. ಇದೀಗ ಸನ್‌ಸಾವಿರದೊಂಬೈನೂರ ಅರವತ್ತ ನಾಲ್ಕನೇಯಲ್ಲಿ ಇದ್ದಕ್ಕಿಂದ್ದಂತೆ ಖಳೆವಂತನಾಗಿ ಹೊಳೆಯಕ್ಕೆ ಶುರು ಮಾಡಿದ್ದು ಸರಿಯಷ್ಟೆ. ಈ ಬಗ್ಗೆ ಸುಬ್ಬಯ್ಯನನ್ನು ವಿಚಾರಿಸಿದಾಗ ಐದು ದಿನವಾಯಿತು ನನ್ನ ಹೆಂಡತಿ ಮಾತನಾಡಿ" ಎಂದ. "ಅದು ಏಕೋ ಲಕ್ವಗಿಕ್ವ ಎಂದು ನಾನೆನ್ನುವಷ್ಟರಲ್ಲೇ "ಛೆ ಛೆ ಹಾಗೇನೂ ಇಲ್ಲ ನಾನೇ ತಡೆ ಹಾಕಿದೆ" ಎಂದ ಅವನು. "ಸುಳ್ಳು ಹೇಳಿದ್ರೂ ನಿಜದ ತಲೇಮೇಲೆ ಹೊಡೆದತರ ಬೇಕಮ್ಮ! ಸುಬ್ಬು ನೀನೆಲ್ಲಾರ ಹೋಗ್ಲಿ ಯಾವ ಗಂಡಾನೇ ಆಗ್ಲಿ, ಹೆಂಡತಿ ಮಾತ್ನ ತಡೆ ಹಾಕೋಕೆ ಆಗುತ್ತ್ಯೆ. ಹಾಕುಕ್ಕೆ ಹೋಗಿ ಬದುಕೋಕ್ಕಾಗುತ್ಯೆ, ಬಿಡೋ ಬಿಡೋ ಈ ಬುಲೆರ್ಟಿ ಯಾರ ಹತ್ರ ಬಿಡ್ತಿ" ಎಂದು ನಾನು ಹೇಳಿದರೂ ಅವನ ಮನೆಗೆ ಮೂರನೆ ದಿನ ಹೋಗಿ ಮಹಾ ಮೌನಿಯಾಗಿದ್ದ ಶ್ರೀಮತಿ ಸುಬ್ಬಯ್ಯನನ್ನು ನೋಡಿದಾಗ ನನ್ನ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳ ಬೇಕಾಯಿತು. ಕುತೂಹಲದಿಂದ ಅವನ ಹೆಂಡತಿಯ ಮಾತಿಗೆ ಅಣೆ ಕಟ್ಟಿದ ಬಗ್ಗೆ ಅವನನ್ನು ವಿಚಾರಿಸಿದಾಗಿ ಅವನು ಗುಟ್ಟಾಗಿ ನನ್ನಬಳಿ ಹೇಳಿದ.

"ಇದರಲ್ಲಿ ಅಸಾಧ್ಯ ಬುದ್ಧಿವಂತಿಕೆ ಏನೂ ಇಲ್ಲ ವೇಣು. ಐದು ದಿನದ ಹಿಂದೆ ರಾಘವ ಬಂದಿದ್ದ. ಅವನ ಕೈಲಿ ಲೋಕ ರಾಜಕೀಯ ಮಾತಾಡುತ್ತಾ ಇವಳಿಗೆ ಕೇಳುವಂತೆ ಜೋರಾಗಿ ಅವಳಿಗೂ ವಯಸ್ಸಾಯಿತು ಪಾಪ ಅದಕ್ಕೆ ಅಷ್ಟೊಂದು ಮಾತು. ಈ ತರಹ ಮಾತಾಡೋದು ವೃದ್ಧಾಪ್ಯದ ಶುರುವಿನ ಲಕ್ಷಣ ಅಂತ ಲೈಫನಲ್ಲಿ ಬಂದಿತ್ತಲ್ಲ ಅಂತ ಹೇಳಿದೆ. ಅದನ್ನ ಕೇಳಿದ ಲಾಗಾಯ್ತು ಮಾತೇ ಇಲ್ಲ ಅವಳ್ದು. ಈಗ ಹಾಯಾಗಿದ್ದೀನಿ ಎಂದ!

ಇತಿ

ವೇಣುಗೋಪಾಲ

[ನಾವೂ ಈ ಉಪಾಯವನ್ನು ಹೂಡಿದೆವು. ಆದರೆ ಫಲಿತಾಂಶ ಸರಿಹೋಗಲಿಲ್ಲ! ಸಂ]

ಸಂಕ್ರಾಂತಿ ಫಲ

ಮೂಗಿನವರೆಗೂ ಅವರೇಕಾಳು ಮೇಲೋಗರ, ಸಕ್ಕರೆ ಪೊಂಗಲು ತಿಂದು ಮುಸು ಕಿಟ್ಟ ಮೈಲಾರಯ್ಯ ತಾಂಬೂಲ ಸವಿಯುತ್ತಾ ಕೊರಡಿಗೆ ಬಂದ. ಸರಸು ಗುಡುಗಿದಳು !

"ಸಂಜೆ ತನಕ ಗೊರಕೆ ಹಾಕಬೇಡಿ ಸಧ್ಯ ! ನಾನು ಮೂರು ಗಂಟೆಗೆ ಎಳ್ಳು ಬೀರುಕ್ಕೆ ಹೊರಡಬೇಕು ; ಆಟೋರಿಕ್ಷಾ ತಂದುಕೊಡಬೇಕಾಗುತ್ತೆ ಅನ್ನೋದನ್ನ ಮರಿತೀರಿ."

"ಆ...ಹಾಗಾದರೆ, ಅಟ್ಟದಿಂದ ಅನ್ನದ ತಪ್ಪಲೆ ಇಳಿಸಿಕೊಡಲೇನು ?"

"ಅನ್ನದ ತಪ್ಪಲೆ ಯಾಕೆ ಊಟ ತಿಂಡಿ ಆದಮೇಲೆ ?"

"ಎಳ್ಳು ತುಂಬಿಕೊಳ್ಳೋದಕ್ಕೆ...ಕಂಕುಳಲ್ಲಿ ತಪ್ಪಲೆ ಏರಿಸಿ, ನಾಗರುಕುಚ್ಚು ಹಾಕ್ಕೊಂಡು, ಮದುವೆ ಪಟ್ಟೇ ಸೀರೆ ಉಟ್ಟು, ಹೊರಡ್ತೀತಾನೇ ?"

"ಯಾವ ಶತಮಾನದಲ್ಲಿದೀರ್‍ರೀ ? ನಾಗರೂಗೆ ಕರೀದಾರ ತೂರಿಸಿ, ಪದಕ ಮಾಡ್ಕೊಂಡು, ಗಂಡನ್ಮನೇಗೆ ತೊಗೊಂಡು ಹೋದಳು ಪದ್ದು. ಕುಚ್ಚನ್ನ, ಚಚ್ಚಿ ಸ್ನಿಲ್ವೇ ಅವಳ ಮದುವೇಲಿ ಚೈನು ಮಾಡಿಸುಕ್ಕೆ ?...ಅಷ್ಟಕ್ಕೂ ನಾನೇನು ಸಣ್ಣ ಹುಡುಗೀ ಏನ್ರೀ ನಾಗರು ಕುಚ್ಚು ಹಾಕ್ಕೊಳ್ಳೊಕ್ಕೆ ?

"ನಾಲಕ್ಕು ಮಕ್ಕಳ ತಾಯಿ ಎಳ್ಳು ಬೀರಕ್ಕೆ ಮಾತ್ರ ಸಣ್ಣ ಹುಡುಗಿ ಅಲ್ವೇನೋ ?...ಹೋಗಲಿ, ಎಳ್ಳಾದರೂ ಬೀರು, ಕಲ್ಲಾದರೂ ಬೀರು ; ಮೂರು ಗಂಟೇಗೆ ಎಬ್ಬಿಸುವಿಯಂತೆ ಈಗ ಒಂದು ಸಣ್ಣ ನಿದ್ದೆ ತೆಗೀತೀನಿ !"

ಪೋಲೀಸ್ ಇನ್‌ಸ್ಪೆಕ್ಟರ್ ಪೀತಾಂಬರರಾಯರ ಪತ್ನಿ ಬಂದರು. ಖಾಕೀ ದಿರಸು ಹಾಕಿದ್ದ ಪೀ. ಸೀ. ಕೈಲಿ ಹಿಡಿದಿದ್ದ ಎಳ್ಳಿನ ತಟ್ಟೆ ಕೆಳಗಿಟ್ಟು, ಕಾಲು ಜೋಡಿಸಿ ಸಟೆದು ಸಲ್ಯೂಟ್ ಹೊಡೆದು, ನಾಲ್ಕು ಹೆಜ್ಜೆ ಹಿಂದಕ್ಕೆ ಮಾರ್ಚ್‌ಮಾಡಿ ನಿಂತ. ಖಾಕೀ ಕಾಗದದ ದೊನ್ನೆಯಲ್ಲಿ ಎಳ್ಳು, ಕೈಕೋಳಾಕಾರದಲ್ಲಿ ಕೊರೆದ ಎರಡು ಕೊಬ್ಬರಿ ಹೋಳುಗಳು ಛಡಿ ದಾರಕಟ್ಟಿ ಹಂಟರಿನಂತೆ ಅಲಂಕರಿಸಿರುವ ಕಬ್ಬಿನತುಂಡು !

ಆಮೇಲೆ ಬಿಸಿನಸ್‌ಮನ್ ಭೀಮಪ್ರಸಾದರ ಭಾರ್ಯೆಯ ಆಗಮನವಾಯ್ತು. ಭಾರೀ ಕಪ್ಪುಕಾರಿನಿಂದಾಕೆ ಇಳಿದದ್ದು. ಹದಿನಾರು ಸೆಂಟಿಮೀಟರು ಜರಿಯಂಚಿನ ಕರಿ ರೇಷ್ಮೆ ಸೀರೆ, ಅದಕ್ಕೊಪ್ಪುವ ಕಪ್ಪು ನೈಲಾನಿನ ಚೋಲಿ ; ಕಣ್ಣಿಗೆ ಕಪ್ಪು ಕನ್ನಡಕ, ಕಾಲಿಗೆ ಕರಿ ವೆಲ್ವಾಟ್ಟಿನ ಚಪ್ಪಲಿ. ಕೈಲಿ ಹಿಡಿದಿದ್ದ ಕರಿಮರದ ಟ್ರೇನಲ್ಲಿ ಕಪ್ಪು ಕಾಗದದ ಕವರಿಗೆ ತುಂಬಿದ್ದದ್ದು ಉಜ್ಜಿ ಬೆರೆಸಿದ ಕರಿ ಎಳ್ಳು, ಬೆಲ್ಲದ ಅಚ್ಚು ಸಿಪ್ಪೆ ತೆಗಿಯದ ಕೊಬರಿ ಗಿಟಕು, ಕಪ್ಪು ಹಳದಿ ಪಟ್ಟೆಯ ರಸತಾಳೆ ಕಬ್ಬು ! ನಂತರ ಬಂದವಳು ಸೊಸೈಟಿ ಗುಮಾಸ್ತೆ ಗೋವಿಂದಯ್ಯನ ಮಗಳು. ದೊಡ್ಡ ಕುಂಬಳ ಕಾಯಿ ಉರುಳಿ ಬಂದಂತಿತ್ತು ಅವಳ ನಡಿಗೆ ಟೊಮೇಟೋ ಹಣ್ಣಿನ ಮುಖದಲ್ಲಿ ರಸದ ನಗೆ ಸುರಿಸುತ್ತ, ಬಾಳೆ ಹಣ್ಣಿಗೆ ಹೆಗ್ಗಣದಲಂಕಾರ ಹಾಕಿಯೇ ಬೀರಿದಳು.

ಅದರ ಬಾಯಿಗೆ ಎಳ್ಳಿನ ಪೊಟ್ಟಣ ಸಿಕ್ಕಿಸಿ, ಬಾಲಕ್ಕೆ ಸಕ್ಕರೆ ಅಚ್ಚು ಕಟ್ಟಿದ್ದರು! ಅವಳು ಬೀರಿದ ಕಬ್ಬು:ಅಷ್ಟೆ. ಸಕ್ಕರೆ ಅಭಾವವನ್ನವರು ಎಂದೂ ಕಂಡರಿಯದಿದ್ದರಿಂದಲೇನೋ ಬಹು ಸಿಹಿಯಾಗಿತ್ತು! ಕೊಬರಿ ಬಟ್ಲು ಕೈಗೆ ಸಿಕ್ಕದಷ್ಟು ನುಣ್ಣಗಿತ್ತು ಗೋವಿಂದಯ್ಯನಂತೆಯೇ!

ಮುಂದಿನದು ಮಂಗಳಮ್ಮನ ಸರದಿ. ಆಕೆಗೆ ಮಂಗಳ ಸೂತ್ರ ಕಟ್ಟಿದ್ದವನು ಎನ್‌ಜೀಓ ಸಂಜೀವಯ್ಯ. "ಏನೋ ಬಿಡಬಾರದೂಂತ ಶಾಸ್ತ್ರಕ್ಕೆ ತಂದಿರೋ ಎಳ್ಳು ಸರಸಮ್ಮ...ಕೊಟ್ಟಿದ್ದ 5—2 ರೂಪಾಯಿನ್ನೂ ಹಿಂದಿರುಗಿಸಬೇಕಂತೆ; ಜೊತೇಗೆ 15 ಪೈಸೇ ಮನಿಯಾರ್ಡರ್ ಖರ್ಚುಬೇರೆ!...ಇದ್ದಿದ್ದರೆ ಎಳ್ಳು ಬೆಲ್ಲಕ್ಕಾದರೂ ಆಗುತಿತ್ತು" ಎಂದು ಸೆರಗಿನ ಕೊನೆಯಿಂದ ಕಣ್ಣೊರೆಸಿಕೊಂಡಳು.

ಮಿಡಲ್ ಸ್ಕೂಲ್ ಮಾಸ್ತರ ಮಡದಿ ಮೀನಾಕ್ಷಮ್ಮ ಗೇಟು ತೆಗೆದರು. ಎಳ್ಳಿನ ತಟ್ಟೆ ತರಲೇ ಇಲ್ಲ. ಒಂದು ಕೈಲಿ ಪಂಚಪಾತ್ರೆ ಉದ್ಧರಣೆ, ಇನ್ನೊಂದು ಕೈಲಿ ಒಂದು ಕಾಗದದ ಪೊಟ್ಟಣ. ಒಳಕ್ಕೆ ಬಂದು, ಸರಸು ಕೈಗೆ ಒಂದು ಚಿಟಿಕೆ ಎಳ್ಳನ್ನು ಪೊಟ್ಟಣದಿಂದ ತೆಗೆದು ಹಾಕಿ ಒಂದುದ್ಧರಣೆ ನೀರು ಸುರಿದಳು! ಇದೇನ್ರೀ ಮೀನಾಕ್ಷಮ್ಮ? ಎಳ್ಳು ನೀರು ಬಿಡ್ತಿದ್ದೀರಿ?" ಕೇಳಿದಳು ಸರಸು. "ಇನ್ನೇನು ಮಾಡೋಣ ಸರಸಮ್ಮ? ಊರಿನ ದೊಡ್ಡ ಬ್ಯಾಂಕೇ ಮುಳುಗೋದರಲ್ಲಿದೆಯಂತೆ. ಕೂಡಿಟ್ಟಿದ್ದ ಪುಡಿಗಾಸ್ನೆಲ್ಲ ಅದರಲ್ಲಿಟ್ಟಿದೀವಲ್ರೀ?" ಎಂದು ನಿಟ್ಟುಸಿರು ಬಿಟ್ಟಳು!

ಕೊನೆಯಲ್ಲಿ ಕಸೂತಿ ಚೌಕಮುಚ್ಚಿದ ತಟ್ಟೆ ತಂದವರು ಕಪಿನೀಪತಯ್ಯನ ಅರ್ಧಾಂಗಿ ಕಪಿಲಾಬಾಯಿ. ಆಕೆಯನ್ನು ಚಾಪೆಯ ಮೇಲೆ ಕೂರಿಸಿ, ಆಕೆ ಕೊಟ್ಟ ಬಾಗಿನ ತೆಗೆದಿರಿಸಿಕೊಂಡು, ಅರಿಸಿನಕುಂಕುಮ ಹೂವು ತಂದಳು ಸರಸು. "ಆಚೆಗೆ ತೊಗೊಂಡು ಹೋಗ್ರೀ! ಅದನ್ನ ನನ್ನ ಕಣ್ಣೆದುರಿಗೇ ತರಬೇಡಿ. ಬೆಳಗ್ಗಿಂದ ಸಂಜೆವರೆಗೆ ಬಂದವರ ಮೂತಿಗೆಲ್ಲಾ ಚಾಚಿದೀನಿ ಆ astor ಹೂವನ್ನ!" ಅರಚಿದಳು ಕಪಿಲಾಬಾಯಿ! (ಕಪನೀಪತಯ್ಯ ರೇವಣಾತಿ ಕಳೆದುಕೊಂಡ ಕಾರ್ಪೊರೇಟರ್ ಅಭ್ಯರ್ಥಿಗಳಲ್ಲೊಬ್ಬ; ಆತನ ಗುರುತು 'ಹೂವು!) ಪಾಪ, astor ಹೂವನ್ನು ನೋಡಿದ್ದಕ್ಕೆ ಆಕೆಗೆ ಮೂರ್ಛೆಯೇ ಬಂದುಬಿಟ್ಟಿತು. "ನೀರು ತೊಗೊಂಡು ಬಾ ಸರಸೂ ಬೇಗ! ನೀರು! ಚುಮುಕಿಸು ಮುಖಕ್ಕೆ!" ಒಂದೇ ಉಸುರಿನಲ್ಲಿ ಕೂಗಿಕೊಂಡ.

"ಏಳ್ರೀ! ಏನು ಹೀಗೆ ಕೂಗ್‌ಕೋತಾ ಇದೀರಿ?...ಎಚ್ಚರ ಆಗ್ಲಿಲ್ವೇ?... ರುಚಿಯಾಗಿದೆ ಅಂತ ಹನ್ನೆರಡು ಸೌಟು ಮೇಲೋಗರ ಮೇಯ್ದರೆ ಕೆಟ್ಟ ಕನಸಾಗದೆ ಇನ್ನೇನಾಗತ್ತೆ?...ಎದ್ದು. ಆಟೋರಿಕ್ಷಾ ತೊಗೊಂಡ್ಬನ್ನಿ ಹೋಗಿ, ಹೊತ್ತಾಯ್ತು!

ಚುಮುಕಿಸುತ್ತಿದ್ದಳು ನೀರನ್ನು ಸರಸು ನನ್ನ ಮುಖಕ್ಕೆ!

—ಟಿ. ಸುನಂದಮ್ಮ

ಸಾಹೇಬರ ಸ್ವಗತ

ನಾನೇನ ಮಾಡಿದೆನೊ ನನಗೆ ಅದರರಿವಿಲ್ಲ
" ಹೋಗೋ ಭಿಕಾರಿ ನೀನ್ ನಾಯಲ್ಲ ಹಂದಿ "
ಎಂದೆನ್ನ ಕಳುಹಿದವರೇನಾದರೇನಂತೆ
ನಾಯೊ ಹಂದಿಯೊ ನನಗೆ ನನ್ನದೇ ಚಿಂತೆ.

" ಕೊಡುವದೇವಗೆ ಕೊಡುವ ಎನಿಸಿದಾಗ
ಭಾವಣಿಯು ಹರಿದು ಸುರಿಯುವನು ದುಡ್ಡ "
ಇಂದು ಕುಳಿತಿಹ ಕುರ್ಚಿ ಭದ್ರವಾಗಿರುವಾಗ
ಹಿಂದಾದ ಭಂಗಗಳಿಗಳುವನು ಹೆಡ್ಡ.

ಬೇಕೆಮಗೆ ಸಾವಿರದ ಲೆಕ್ಕದಲಿ ಶಿಕ್ಷಕರು
ಫೌಂಡ್ರಿತಜ್ಞರು ಬಡಗಿ ಕಮ್ಮಾರರು
ಕುಶಲ ಕರ್ಮಿಗಳು ಯಂತ್ರಜ್ಞರು ಅಜ್ಞರೂ
ವೈರಮನ್ನು ಪ್ಲಂಬರರು ವೆಲ್ಡರುಗಳು.

ಎಂದೆಲ್ಲ ಬೊಬ್ಬೆ ಹೊಡೆಯುತ್ತಿರುವರೆಲ್ಲಕಡೆ
ಒಳಗುಟ್ಟು ಬಲ್ಲವರದೆಷ್ಟು ಜನರು
ಕೆಲಸವಿಲ್ಲೆನುತಿಹರು ಹಲವು ವರ್ಷಗಳಿಂದ
ಇಲ್ಲಿಂದ ಹೊರಬಿದ್ದ ಗ್ರಾಜುಯೇಟುಗಳು.

ಲೇವದೇವಿ ಪ್ರಿಯರು ಕಾರ್ಯನಿರ್ವಾಹಕರು
ವರ್ಕಷಾಪು ಸ್ಟಾಫ್‌ರೂಮು ಮೀನಸಂತೆ
ಫೈಲುಗಳ ಬದಿಗಿರಿಸಿ ಪೇಪರೋದುತ್ತಿರುವ
ಕ್ಲಾರ್ಕುಗಳ ತಲೆಯಲ್ಲಿ ಇಂಕ್ರಿಮೆಂಟ್ ಚಿಂತೆ.

ಹೇಳುವುದ ಕೇಳಿರುವೆ ಪುರುಷನಾ ಭಾಗ್ಯವನು
ದೇವನೇ ಸ್ವತಃ ಕಂಡರಿಯನಂತೆ
ಇನ್ಕ್ರಿಮೆಂಟ್ ಕೊಡಿಸೆಂದ ಕೇಳಿಮಾಡುವುದೇನು
ಬಂದಾಗ ಬರಲೆಂದು ಕಣ್ಮುಚ್ಚಿ ಕುಂತೆ.

—ರಾಂಜಿ

ಸಿನಿಮಾ ನ್ಯಾಯ

ಬರೆದವರು :
ಕೆ. ಎಸ್. ಕಿಟ್ಟನ್

★

ತಿರುಗುವ ಕುರ್ಚಿಯಮೇಲೆ ಕುಳಿತು ಮುಂದಿದ್ದ ಮೇಜಿನಮೇಲೆ ಪಾಪಾಸು ಕಟ್ಟಿದ ಕಾಲನ್ನು ಚಾಚಿಕೊಂಡು, ಆಕ್ಟರ್, ಪ್ರೊಡ್ಯೂಸರ್, ಡೈರೆಕ್ಟರ್ ಚಿನ್ನಪ್ಪನವರು, 555 ನ್ನು ಸೇದುತ್ತಿದ್ದರು. ಕೆದರಿದ ಕೇಶರಾಶಿ, ಕುರುಚಲು ಗಡ್ಡ ಸಣಕಲು ದೇಹಕ್ಕೆ ಜುಬ್ಬವನ್ನು ತೊಡಿಸಿದ್ದ ವ್ಯಕ್ತಿ ಎದುರು ಕುರ್ಚಿಯಮೇಲೆ ಮಂಡಿಸಿತ್ತು. ಸೋಡಾಗ್ಲಾಸಿನ ಚಸ್ಮದೊಳಗಿಂದ ಪಿಳಿ ಪಿಳಿ ಕಣ್ಣು ಬಿಡುತ್ತಾ ಆಜಾನುಬಾಹು ಚಿನ್ನಪ್ಪನವರನ್ನೇ ಅದು ನೋಡುತ್ತಿತ್ತು.

"ಮುರಿಗ್ಯಾ" ಅಂತ ಚಿನ್ನಪ್ಪನವರು ಇದ್ದಕ್ಕಿದ್ದಂತೆ ಗುಟುರು ಹಾಕಿದರು. ಆ ಶ್ರುತಿಗೆ ಇಡೀ ಗೋಡೆಗಳೆಲ್ಲಾ ಕಂಪಿಸಿದವೋ ಎಂಬಂತೆ ಗೋಡೆಗೆ ತಗುಲಿಸಿದ ಕ್ಯಾಲೆಂಡರು ಪಟಪಟನೆ ಬಡಿದುಕೊಂಡಿತು.

ಮುರಿಗ್ಯಾ ನಡು ಬಗ್ಗಿಸಿ ಹಾಜರಾದ.

"ಸೌಮಿಯೋರಿಗೆ ಒಂದು ಗ್ಲಾಸು ನೀರು, ನನಗೆ ಒಂದು. ಲೈಂಜ್ಯೂಸು" ಎಂದಪ್ಪಣೆ ಮಾಡಿದರು ಚಿನ್ನಪ್ಪ. ಮುರಿಗ್ಯಾ ಬಂದು ಹೋದನಂತರ ಚಿನ್ನಪ್ಪನವರು ಆ ವ್ಯಕ್ತಿಯನ್ನುದ್ದೇಶಿಸಿ ಹೇಳಿದರು.

"ನಿಮ್ಮ ಎಸ್ರು ಏನಂತಿಂದ್ರಿ...?"

"ಗುಜ್ಜಪ್ಪ..."

ಚಿನ್ನಪ್ಪನವರು ಬೇವಿನಕಾಯಿಯನ್ನು ಕಡಿದವರ ಹಾಗೆ ಆಡಿದರು. ಅವರಿಗೆ ಒಮ್ಮೆಲೆ ನಿರಾಶೆಯಾದಂತಾಯಿತು. ಯಾವುದಾದರೂ ಶುಂದರನಾದ ಸಿನಿಮಾಯುವಾದ ಹೆಸರು ಕಿವಿಗೆ ಬೀಳಬಹುದೆಂದು ಅವರು ನೀರಿಕ್ಷಿಸಿದ್ದು ವ್ಯರ್ಥವಾಯಿತು.

"ಛೇ ಛೇ ಅಂಗೆಲ್ಲಾ ಎಸ್ರುಮಡಕ್ಕೊಂಡು ಸಿನಿಮಾನಾಗೆ ಇಸ್ಟೋರಿ ಬರೆದ್ರೆ ಪಿಚ್ಚರ್ರು ರನ್ ಆಯ್ತದೇನ್ರಿ. ನಿಮ್ಮ ಎಸರನ್ನ ಮೊದ್ಲು ಬದ್ಲಿ ಮಾಡ್ಬುಡಬೇಕು ಅಂತ ಅಪ್ಪಣೆ ಕೊಡಿಸಿದರು ಚಿನ್ನಪ್ಪ.

"ನನ್ನ ಅಪ್ಪ, ಅಮ್ಮ ಇಟ್ಟ ಹೆಸ್ರು ಸಾಮಿ. ಅದು ಹೇಗೆ ಬದಲಾಯಿಸೋದು.

"ಅದ್ಕೇನಂತೀ ಯಾವ್ದಾದ್ರು ಕುಮಾರ್ ಅಂತ ಕೊನೇಲಿ ಮಡಕ್ಕೋಳ್ದಿದ್ರೆ ಸೆಂದಾಗಿರೋಲ್ರಿ. ನಿಮ್ಮಮ್ಮನ ಎಸ್ರೇನು...?"

" ರೆಮ್ಮಕ್ಕ ಅಂತ..."

" ಸರಿ ಅಂಗಾದ್ರೆ ತಿಮ್ಮಕುಮಾರ್ ಅಂತ ಎಸ್ರು ಮಡಕ್ಕೊಂಡು ಬುಡ್ರಿ ಪಿಚ್ಚರ್ ನಾಗೂ ಇಸ್ಟೋರಿ ತಿಮ್ಮಕುಮಾರ್ ಅಂತ್ಲೇ ಆಕಿಸ್ಬುಡೋವ...ಅಂತ ಎಲ್ಲವೂ ತೀರ್ಮಾನವಾದಂತೆ ಹೇಳಿದರು ಚಿನ್ನಪ್ಪ.

ಮೊದಲೇ ಕವಿ ಹೃದಯದ ವ್ಯಕ್ತಿ. ಅದರ ಮನ ನೊಂದಿತು. ಆದರೂ ಕಷ್ಟಾನುಭವಿಯಾದುದರಿಂದ ಸಂಕಟದ ಮುಖದಲ್ಲೂ ನಗೆ ತುಳುಕಿಸಿತು.

" ಆಗಬಹುದು. ತಾವು ಏನು ಕರೆದರೂ ನನಗೆ ಸಮ್ಮತವೇ..." ಎಂದು ಹೇಳಿ ಕವಿ ತಾನು ತಂದಿದ್ದ ಗೋಣೀ ಬ್ಯಾಗಿನಿಂದ ಕಾಗದದ ಕಡತವನ್ನು ಹೊರ ತೆಗೆದು ಚಿನ್ನಪ್ಪನವರ ಮುಂದೆ ಹಿಡಿದು, ಸರಕ್ಕನೆ ಮತ್ತೆ ಗೋಣಿಚೀಲದೊಳಗೆ ತುರುಕಿತು.

" ಈಗ ಓದಿ ನಿಮ್ಮ ಕಥೇನಾ..." ಅಂತ ಹೇಳಿ ಚಿನ್ನಪ್ಪನವರು ಮತ್ತೊಂದು 555ಕ್ಕೆ ಬೆಂಕಿ ಹಚ್ಚಿದರು. ತಿಮ್ಮಕುಮಾರ ಅನುಮಾನಿಸುತ್ತಿರುವುದು ನೋಡಿ " ಯಾಕ್ರೀ ಓದಾಕೆ ಬರಾಕಿಲ್ವಾ " ಎಂದು ಕೇಳಿದರು. ಕಥೆ ಬರೆಯುವವನಿಗೆ ಅದನ್ನು ಓದಲೂ ಬರಬೇಕು ಎಂದೆನ್ನುವ ಜಾಯಮಾನವಲ್ಲ ಚಿನ್ನಪ್ಪನವರದು.

" ನಾನೇ ಬರೆದಿದ್ದೇನೆ. ಅಂಥಾದ್ರಲ್ಲಿ ನನಗೆ ಓದೋಕೆ ಬರೋಲ್ವೆ...? "

" ಅಂಗಾದ್ರೆ ಅನ್ಮಾನ ಯಾಕೆ ಓದಿ. ಇಲ್ಲ ಇನ್ನೊಂದು ಗ್ಲಾಸು ನೀರೇನಾರಾ ಬೇಕೋ ? "

" ಅದಕ್ಕಲ್ಲಾ ಸಾರ್..."

" ಮತ್ತಿನ್ನೇನ್ರೀ ?..."

" ಕಥೆ ಓದೋಕೆ ಮುಂಚೆ ತಾವು ಒಂದು ಪ್ರಾಮಿಸ್ ಮಾಡ್ಬೇಕು..."

" ಪ್ರಾಮಿಶ್, ಎಂಥಾ ಪ್ರಾಮಿಶರೀ ?..." ಪ್ರಾಮಿಸರಿ ನೋಟು ಬರ್ಕೊಡು ಅಂತ ಕೇಳ್ತಿದ್ದಾನೋ ಎಂಬ ಅನುಮಾನವಾಯಿತು ಚಿನ್ನಪ್ಪನವರಿಗೆ.

" ತಾವು ಈ ಕಥೇನ ನಿಮ್ಮ ಚಿತ್ರಕ್ಕೆ ತಗೊಳ್ತೀನಿ ಅಂತ ಭರವಸೆ ಕೊಡಬೇಕು."

ಪಕಪಕನೆ ನಕ್ಕರು ಚಿನ್ನಪ್ಪ: ಎಲ್ಲೋ ಮರಳುಮಾತಿದು ಎಂದು ಮೂದಲಿಸುವ ನಗೆ ಅದು. ಕವಿಯ ಮುಖ ಕಪ್ಪಿಟ್ಟದ್ದು ನೋಡಿ ಅವರು ನಗೆಯನ್ನು ನಿಲ್ಲಿಸಿದರು.

" ಅಲ್ರೀ, ಕಥೆ ಎಂಗೈತೆ, ಚೆಂದಾಗೈತೋ ಇಲ್ವೋ ಒಂದೂ ತಿಳೀದೇನೆ ಎಂಗ್ರಿ ಪ್ರಾಮಿಶ್ ಮಾಡೋದು ? "

" ನೀವು ಹೇಳೋದು ನಿಜವಿರಬಹುದು ಸಾರ್. ಆದ್ರೆ, ನನ್ನ ಅನುಭವದಲ್ಲಿ ಈ ಫಿಲಂನೋರೆಲ್ಲಾ ಫೋರ್‌ಟ್ವೆಂಟಿಗಳು. ನಿಯತ್ತಿಲ್ಲ ನ್ಯಾಯವಿಲ್ಲ. ಎಲ್ಲಾ ದಗಲ್‌ಬಾಜಿಗಳು ಸಾರ್..."

ಚಿನ್ನಪ್ಪನವರ ಭದ್ರಹಸ್ತ ಮುಷ್ಟಿ ಬಿಗಿಯಿತು. ಕವಿಯ ದವಡೆಗೆ ಎಲ್ಲಿ ಅದು ಬಡಿಯುವುದೇನೋ ಎಂಬ ಅನುಮಾನವಾಯಿತು.

"ನಿಮ್ಮನ್ನ ಹಾಗೆ ಹೇಳಿದೆ ಅಂನ್ಕೋಬೇಡಿ ಸಾರ್. ನನಗೆ ಎಷ್ಟೋ ಕೆಟ್ಟ ಅನುಭವವಾಗಿದೆ. ಅದಕ್ಕೆ ಮನರೋಸಿದ ಮಾತು ಹೃದಯದಲ್ಲಿ ನಿಲ್ಲಲಾರಥೆ ಹೊರಬಂತು."

ಚಿನ್ನಪ್ಪನವರ ಮುಷ್ಟಿ ಸಡಲಿತು. ಅವರದೂ ಮಗು ಹೃದಯ. ಈ ಕವಿಗೆ ಎಂಥಾ ಪಾಡು ಬಂದಿತ್ತೋ ಕೇಳಬೇಕೆಂಬ ಕುತೂಹಲ ಮೊಳೆಯಿತು.

"ಏನಾಯ್ತು ಅದಾದ್ರು ಹೇಳಿ. ನಿಮ್ಮ ಅನುಭವಾನ್ನು ಪಸಿ ಕೇಳೋಣಾ" ಎಂದರು ಚಿನ್ನಪ್ಪ.

"ಅಯ್ಯೋ ಅದ್ಯಾಕೆ ಕೇಳ್ತೀರಾ ಸಾರ್. ಒಂದೇ ಎರಡೇ. ಬೇಕಾದಷ್ಟಿದೆ..."

"ಪರ್ವಾಗಿಲ್ಲ ಯೇಳಿ. ನಾನು ಬಿಜಿಯಾಗಿಲ್ಲ ಈವತ್ತು..."

"ಹತ್ತು ರೂಪಾಯಿಕೊಟ್ಟು ಕಾಗದದ ದಸ್ತು ಖರೀದಿಮಾಡಿ, ಒಂದು ಕಥೆ ಬರದೆ ಸಾರ್. ಕಥೆ ಅಂದರೆ ಕಗ್ಗವಲ್ಲ. ಹಸನಾದ ಪ್ಲಾಟು. ಬಂಗಾರದ ಗೊಂಬೆ ಅಂತ ಟೈಟ್ಲು. ಹನುಮಂತ್ ಪಿಕ್ಚರ್ಸ್ ಪ್ರೊಡ್ಯೂಸರ್ ಇದ್ದಾರಲ್ಲ ಪೂರಿ ಅಂತ ಅವರ ಹತ್ತಿರ ತೆಗೊಂಡು ಹೋಗಿ ಕಥೇನ್ನ ಓದಿದೆ. ಕಥೇನಾ ಮೊದ್ಲಿಂದ್ಲು ಕಡೇ ತನಕ ಕೇಳಿದರು. 'ನೀನು ಎರಡು ಟ್ವಿಸ್ಟ್ ಮಡಗಿದ್ದೀಯೆ ಪ್ಲಾಟಿನಲ್ಲಿ, ಸ್ಟೋರೀನೂ ಸುಖವಿಲ್ಲ' ಅಂತ ಹೇಳಿಬಿಟ್ರು.

"ಸರಿಯೇ ಕಥೇ ಸೆಂದಾಗಿಲ್ದಿದ್ರೆ ಅವರ್‍ತಾನೆ ಏನು ಮಾಡೋಕಾಯ್ತದೆ..."

"ಇಲ್ಲಿ ಕೇಳಿ ಸಾರ್. ಚೆನ್ನಾಗಿಲ್ಲ ಅಂತ ಹೇಳಿ; ಆ ಪೂರಿ. ನನ್ನ ಸ್ಟೋರೀನೇ 'ಬೆಂಡಿ ಬಜಾರ್' ಅಂತ ಹೆಸರಿಟ್ಟು ಪಿಕ್ಚರ್ ಹಿಡಿದೇಬಿಟ್ಟ ರ್ಯಾಸ್ಕಲ್. ಇನ್ನೊಂದು ಸಲ ಫಸ್ಟ್‌ಕ್ಲಾಸ್ ಪತ್ತೇದಾರಿ ಕಥೆ ಬರೆದಿದ್ದೆ. ನಾಲ್ಕು ಡ್ಯಾನ್ಸು, ನಲವತ್ತು ಹಾಡು ಎರಡೇ ಸೆಟ್ಟಿನ ಪ್ಲಾಟು. ಪ್ರೊಡ್ಯೂಸರ್ ಗುಲಾಬ್ ಚಂದ್ ಅಂತ ನೀವು ಕೇಳಿರ ಬೇಕು. ಆತನ ಹತ್ತಿರ ಕೊಟ್ಟೆ. ತಿಂಗಳಾಯ್ತು, ವರ್ಷವಾಯ್ತು. ಅವನ ಸ್ಟುಡಿ ಯೋಕ್ಕೆ ಓಡಾಡಿ ನನಗೆ ಸುಸ್ತಾಯ್ತು. ಯಾವ್ದೊ ಒಂದಿನ ಅವನದೇ ಪಿಚ್ಚರು ಮುಳ್ಳೂರಿನ "ಕನಕಾಂಬರ" ಟಾಕೀಸಿನಲ್ಲಿ ನೋಡಿದೆ. ಪಾಪಿ ಮೊದಲಿಂದ ಕಡೇ ತನಕ ನಂದೇ ಸ್ಟೋರಿ ತೆಗೆದಿದ್ದಾನೆ. ಗುಲಾಬ್ ಚಂದನ್ನ ಹಿಡ್ದು ನಾನು ಕೇಳಿದೆ ಏನ್ರೀ ಇದು ಅನ್ಯಾಯ ಅಂತ. ನನಗೆ ಹೇಳಲೂ ಇಲ್ಲ. ನನ್ನ ಹೆಸ್ರು ಟೈಟಲ್ ಕಾರ್ಡಿನಲ್ಲೂ ಇಲ್ಲ. ಯಾಕೆ ಹೀಗೆ ಮಾಡಿದಿರಿ ಅಂತ ಕೇಳಿದೆ. ಅವನೇನಂಥ ಗೊತ್ತೆ ?"

"ಏನಂದ...?"

" ನೀನ್ಯಾರು ? ಅಂತ ಕೇಳೇಬಿಟ್ಟ."

" ಅಂಗಾ..."

" ಊ. ನಾನು ನನ್ನ ಕುಲಗೋತ್ರವನ್ನೆಲ್ಲಾ ಹೇಳಿದೆ. ಭಂಡ ಕಿವಿಗೊಟ್ಟರೆ ತಾನೆ. ನಾನು ಬರೆದ ಹಾಳೆಗಳನ್ನಾದ್ರು ಕೊಡ್ರೀ ಅಂತ ಅಂಗಲಾಚಿದೆ."

" ಕೊಟ್ಟನೇನು ? "

" ಕೊಡ್ತಾನ್ಯೆ ಕಳ್ಳಭಡವ. ಕುತ್ತಿಗೆ ಹಿಡಿದು ದಬ್ಬಿಸೇ ಬಿಟ್ಟ."

" ಛೇ...ಛೇ..."

" ಅದಕ್ಕೆ ಸಾರ್, ನಾನು ಈ ಸಿನಿಮಾದೋರಿಗೆ ಓದೋಕಾಗ್ಲಿ, ನೋಡೋಕಾಗ್ಲಿ ಕಥೇನ ಕೊಡೋಲ್ಲ. ಅವರ ಕಣ್ಣೆದುರಿಗೆ ಕಥೆ ಪಿಂಡೀನ ಹಿಡಿಯೋದು. ಅವರೇ ಆ ಕಥೆ ವರ್ಜನ ಅರ್ಥಮಾಡಿಕೊಳ್ಳಬೇಕು ಬುದ್ದಿಯಿದ್ದರೆ..."

ಕವಿಯ ಮಾತು ಕೇಳಿ ಚಿನ್ನಪ್ಪನವರು ಕರಗಿ ನೀರಾದರು. ಸಿನಿಮಾದಲ್ಲಿ ನ್ಯಾಯ ಇಲ್ಲಾಂತ ತಿಳ್ಕೋಬ್ಯಾಡಿ. ಏನೋ ಒಂದೆರ್ಡು ಬದ್ಮಾಸ್ ಗೋಳು ಸೇರ್ಕೊಂಡು ಕೆಸಬಿಗೇ ಅವಮಾನ ಮಾಡ್ಬುಟ್ಟವ್ರೆ. ನಾನು ಎಂಥಾ ಕಂಡೀಸನ್ ಮನ್ಸ ಅಂತ ನಿಮಗೆ ತಿಳುವಳಿಕೆಯಿಲ್ಲ. ಬೇಕಾದ್ರೆ ನಮ್ಮ ಮುರಿಗ್ಯಾನ್ನೆ ಕೇಳ್ಕೊಳ್ಳಿ. ನೋಡಿ ನಿಮ್ಮ ಕಥೇ ಓದ್ದೀನೆ, ಎಂಗೈತೋ ಏನೋ ತಿಳೀದೇನೆ ಅದನ್ನ ಪಿಚ್ಚರು ಇಡದ್ಬುಡ್ತೀನಿ. ಟೈಟ್ಲ್‌ಕಾರ್ಡಿನಾಗೂ ನಿಮ್ಮ ಎಸರನ್ನೇ ಆಕಸ್ತೀನಿ ಒಪ್ಪಿಗೇನೋ..."

" ಬಹಳ ಉಪಕಾರವಾಯ್ತು ಸಾರ್. ತಾವು ಅಷ್ಟು ಮಾಡಿದ್ರೆ " ಅಂತ ಹಸಿದ ಕವಿ ಚಿನ್ನಪ್ಪನವರೆದುರು ನಮ್ರನಾಗಿ ನುಡಿದ.

" ಅಂಗಾದ್ರೆ ಸರಿ " ಅಂತ ಹೇಳಿ ಮುರಿಗ್ಯನ ಹತ್ತಿರ ತಕ್ಕಡಿ ತರಿಸಿ ಚಿನ್ನಪ್ಪನವರು ಕವಿಯ ಹತ್ತಿರವಿದ್ದ ಹಾಳೆಗಳನ್ನು ತೂಕಕ್ಕೆ ಹಾಕಿದರು. ಜೇಬಿನಿಂದ ಎರಡಾಣೆ ತೆಗೆದು ಕವಿಯ ಕೈಲಿಟ್ಟರು.

" ಇದೇನು ಸ್ವಾಮಿ " ಅಂತ ಬೆಚ್ಚಿಬಿದ್ದು ಕೇಳಿದ ತಿಮ್ಮಕುಮಾರ.

" ಇದೇ ನಿಮ್ಮ ರಾಯಲ್ಟಿ ಅಣ, ನಿಮ್ಮ ಕಥೆ ಎಲ್ಡುಕಿಲೋ ವರ್ಜ ಐತೆ. ಕಿಲೋಗೆ ಒಂದಾಣೆ ಅಂಗೆ ಎಲ್ಡಾಣೆ ಕೊಟ್ಟಿವ್ನಿ, ನಾನು ಮೊದಲ್ರೇ ಏಳ್ನಿಲ್ವಾ. ಸಿನಿಮಾದಾಗು ನ್ಯಾಯ ಐತೆ. ನಾನೂ ಕಂಡೀಸನ್ ಮನ್ಸ ಅಂತ ಎಂದು ಹೇಳಿ ಮೇಲೆದ್ದರು ಚಿನ್ನಪ್ಪ.

ಸುಸ್ವಾಗತ

ಬಲವುಗುಂದ ಹಳ್ಳಿಯಲ್ಲಿ ಸಂಭ್ರಮವೋ ಸಂಭ್ರಮ. ಹಳ್ಳಿಯಲ್ಲೇ ಹುಟ್ಟಿ ಬಾಲ್ಯವನ್ನು ಕಳೆದ ಪಟೇಲರ ಮಗ ರಾಮ್ಯ, ಪಹರಿಗೆ ಹೋಗಿ ಬೆಳೆದು ನಿಂತು, ಜನನಾಯಕನಾಗಿದ್ದ. ಹಳ್ಳಿ ಬಿಟ್ಟು ಮೂವತ್ತು ವರ್ಷಗಳಾದಾಗ ರಾಜ್ಯದ ಮುಖ್ಯ ಮಂತ್ರಿಯಾಗಿ ಚುನಾಯಿತನಾಗಿದ್ದ. ಈಗ "ಮಾನ್ಯ ರಾಮನಾಯ್ಕರು" ಆಗಿದ್ದ. ಈಗ, ಅಂದರೆ ಮೂವತ್ತು ವರ್ಷಗಳಾದಮೇಲೆ, ಮೊದಲ ಬಾರಿಗೆ ಹುಟ್ಟಿದೂರಿಗೆ ಭೇಟಿ ಕೊಡುತ್ತಿದ್ದ.

ಹಳ್ಳಿಯ ಒಂದೇ ರಸ್ತೆಯಲ್ಲಿ ಮೂವತ್ತು ಚಪ್ಪರಗಳನ್ನು ಹಾಕಿದ್ದರು, ದೇವಸ್ಥಾನದ ಎದುರಿಗೆ ಹಳ್ಳಿಯ ಪಂಚಾಯ್ತಿ ಚಪ್ಪರ. ಅಲ್ಲೇ ಪಂಚಾಯ್ತಿ ಆಧ್ಯಕ್ಷರು ಪೌರ ಸನ್ಮಾನ ಮಾಡುವ ಏರ್ಪಾಡಾಗಿತ್ತು. ಹಸಿರುವಾಣಿ ಚಪ್ಪರ. ಹೂಮಾಲೆಗಳಿಂದ ಸಿಂಗರಿಸಿದ ಕಂಭಗಳು. ಹಸಿರು ಪೀತಾಂಬರ ಹಾಸಿದ ವೇದಿಕೆ. ಎಲ್ಲಾ ಭರ್ಜರಿ ಮೋಜಿಂದ ಕಂಗೊಳಿಸುತ್ತಿತ್ತು. ಹಳ್ಳಿಯ ಪಂಚಾಯ್ತಿದಾರರು ಮದುವೆ ಅಂಗಿಗಳನ್ನು ತೊಟ್ಟು ಸರಿಗೆ ರುಮಾಲು ತೆಟ್ಟಿ ವಲ್ಲಿ ಹೊದ್ದು ಸಿದ್ಧ ವಾಗಿದ್ದರು.

ನಾಯಿಂದ ನಾರಣಪ್ಪನ ಮನೆ ಮುಂದೆ ಚಪ್ಪರ ಹಾಕಿ ಸುಸ್ವಾಗತ ಅಂತ ಬರೆಸಿದ ಬಟ್ಟೆಯನ್ನು ಅಡ್ಡಡ್ಡ ಕಟ್ಟಿದ್ದರು.

ಮಡಿವಾಳರ ಸಂಘದವರು ಬಿಳಿಬಿಳಿ ಬಟ್ಟೆಯಲ್ಲೇ ಚಪ್ಪರ ನಿರ್ಮಿಸಿ ಸುಸ್ವಾಗತ ಅಂತ ನೀಲಿಯಲ್ಲಿ ಬರೆಸಿದ್ದರು.

ಹಳ್ಳಿಯ ಮಲ್ಟಿ ಪರ್ಪಸ್ ಸೊಸೈಟಿಯವರು ಗೋಣಿಚೀಲಗಳಿಂದಲೇ ಚಪ್ಪರ ಕಟ್ಟಿ ಖಾದಿ ನೂಲಿನಿಂದಲೇ ಸುಸ್ವಾಗತ ಅಂತ ರಚಿಸಿದ್ದರು.

ಶಾಲೆಯ ಮುಂದೆ ಕಾಗದದ ಚಪ್ಪರವನ್ನು ಅಲಂಕಾರವಾಗಿ ಕಟ್ಟಿದ್ದರು. ಬೋರ್ಡಿನ ಮೇಲೆ, ಬಣ್ಣ ಬಣ್ಣದ ಸೀಮೆಸುಣ್ಣದಲ್ಲಿ ಸುಸ್ವಾಗತ ಅಂತ ಬರೆದಿದ್ದರು.

ಇದನ್ನೆಲ್ಲಾ ನೋಡಿದ ಹನುಮ. ನಾಯಕರಿಗೆ ಸುಸ್ವಾಗತ ಬಯಸಬೇಕು ಎಂದು ಅವನಿಗೂ ಹಿರಿಯಾಸೆ ಮೂಡಿತು. ತನ್ನ ಕ್ಷೇತ್ರದ ಮುಂದೆ ಗಳುಗಳಿಂದ ಚಪ್ಪರ ಕಟ್ಟಿದ. ರಾಮನಾಯ್ಕರಿಗೆ ಸುಸ್ವಾಗತ ಅಂತ ದೊಡ್ಡದಾಗಿ ಬರೆಸಿದ ತೋರಣವನ್ನು ಕಟ್ಟಿದ.

ಹನುಮ ಹಳ್ಳಿಯ ಸ್ಮಶಾನದ ಕಾವಲುಗಾರ.

ಜನವರಿ ಮೂವತ್ತು – ಗಾಂಧೀಜಿ ಜನ್ಮದಿನ

★

"ಇದೇನಯ್ಯ ಇಷ್ಟೊಂದು ಗೆಲುವಾಗಿದ್ದೀಯ ಇವತ್ತು; ಜನವರಿ ೩೦... ಆದರೂ ಕೂಡ." ಎಂದು ಕೇಳಿದೆ, ನಮ್ಮ ಪ್ರಾಣೇಶ್ ಮನೆಯೊಳಗೆ ಕಾಲಿಡುತ್ತಿದ್ದ ರೀತಿಯನ್ನು ಕಂಡು.

"ಜನವರಿ ೩೦...ಗಾಂಧೀ ಜಯಂತಿ...ಅಂದಮೇಲೆ ಇರಬೇಡವೆ ಹೀಗೆ" ಎಂದ ಆತ.

"ಜನವರಿ ೩೦...ಗಾಂಧೀ ಜಯಂತಿಯೋ ? ಇದೇನಯ್ಯ ಉಪದ್ವ್ಯಾಸ... ಕವಿವರ್ಯ ಗೋವಿಂದಪೈಗಳು ಹೋಗಿ ಬಹಳ ಕಾಲವಾಗಲಿಲ್ಲ. ತಾರೀಖುಗಳ ಅವಸ್ಥೆ ಇಷ್ಟು ಬೇಗನೆ ಇಲ್ಲಿಗೆ ಬಂತೆ ?" ಎಂದ.

"ನಿಜಕಣಯ್ಯ, ಇವತ್ತು ಗಾಂಧೀಜಿ ಪುಣ್ಯ ದಿನಾಂಬೋದು ನಿಜ. ಆದರೆ ಅವರು ಸತ್ತು ಹುಟ್ಟಿದ ದಿನ. ಆದ್ದರಿಂದ ಜನ್ಮದಿನ ಎಂದೆ ಅಷ್ಟೆ.

"ಅದಕ್ಕೇ ಇಷ್ಟೊಂದು ಮಜಾದಲ್ಲಿರೋದೆ ? ಸರಿ ಬಿಡು ..ಉದ್ಧಾರವಾದ ಹಾಗೆ ಈ ಜನಾಂಗ..."

"ಅಲ್ವೆ ಮತ್ತೆ ? ಈಗ ತಾನೇ ನಾನು ಒಂದು ಗಾಂಧೀಜಿ ಪುಣ್ಯ ದಿನದ ಸಮಾರಂಭಕ್ಕೆ ಹೋಗಿ ಬಂದೆ. ಅದರ ವಿವರ ಕೇಳಿದರೆ ಇವತ್ತು ಗಾಂಧೀಜಿ ಜನ್ಮದಿನವೇ ಸರಿ ಅಂತ ನೀನು ಒಪ್ಪಿಕೊಳ್ಳುತ್ತೀಯ" ಎಂದು ಪ್ರಾಣೇಶ್ ಪತ್ರಿಕಾ ವರದಿಗಾರನಾಗಿ ತಾನು ಕಂಡು ಬಂದ ಗಾಂಧೀಜಿ ಪುಣ್ಯ ದಿನಾಚರಣೆಯನ್ನು ವರ್ಣಿಸಿದ.

ಜನ್ಮದಿನ, ಪುಣ್ಯದಿನ, ಬೆಳ್ಳಿಹಬ್ಬ, ಗೋಲ್ಡನ್ ಜೂಬಿಲಿ, ವಜ್ರೋತ್ಸವ ಶತಮಾನೋತ್ಸವಗಳನ್ನು ಆಚರಿಸುವುದರಲ್ಲಿ ನಮ್ಮ ಕಾಲೇಜು ಯಾವ ಸಂಸ್ಥೆಗೂ ಹಿಂದಿಲ್ಲ. ಅಂತೆಯೇ, ಅವತ್ತು ಜನವರಿ ೩೦ ಅಂತ ಗಾಂಧೀಜಿ ಪುಣ್ಯ ದಿನಾಚರಣೆಯ ಕಾರ್ಯಕ್ರಮ ಇಟ್ಟುಕೊಂಡಿದ್ದರು. ದಿನಾಚರಣೆ ಅಂದರೆ ಭಾಷಣ ತಾನೇಮುಖ್ಯ? ಭಾಷಣಕ್ಕೆ ಇಬ್ಬರು ಅಪ್ಪಟ ಗಾಂಧೀವಾದಿಗಳನ್ನ ಕರೆದಿದ್ದರು. ಅವರ ಜೊತೆಯಲ್ಲಿಯೇ ಪೇಪರಿನವನಾದ ಪ್ರಾಣೇಶ ಹೋಗಿದ್ದ.

ಕಾರು ಕಾಲೇಜಿನ ಆವಾರಕ್ಕೆ ಹೋದ ಕೂಡಲೆ ಮುಖ್ಯಸ್ಥರು ಬಂದು ಸ್ವಾಗತಿಸಿದರು. ಆಗ ದೂರದಲ್ಲಿ ನೆರೆದಿದ್ದ ಹೈಕಳ ಗುಂಪಿನಿಂದ 'ಅಗೋ ಬಂದವಲ್ಲ ಗಾಂಧೀ ಗುಗ್ಗುಗಳು' ಎಂಬ ಉದ್ಗಾರ ಕೇಳಿಬಂತು. ಇವರ ಖಾದಿ ಬಟ್ಟೆ ಹಾಗೂ ಟೋಪಿ ಕಣ್ಣಿಗೆ ಬಿದ್ದೊಡನೆ ಭಾಷಣಕಾರರನ್ನು ಪ್ರಿನ್ಸಿಪಾಲರು ಬೇಗನೆ ತಮ್ಮ ರೂಮಿಗೆ ಒಯ್ದರು. ಪ್ರಾಣೇಶ ಮೇಷ್ಟರುಗಳ ಕಾಮನ್ ರೂಮಿಗೆ ನಡೆದ. ಅಲ್ಲಿ ಆತನಿಗೆ ಸುಪರಿಚಿತರಾದ ಮೇಷ್ಟರೆಲ್ಲ ಒಂದೇ ಸಮನೆ ಹರಟೆ ನಗುತ್ತಿದ್ದರು. "ನೀನು ಯಾಕೆ ಬಂದೆಯೋ ?" ಎಂದು ಗೋಳಾಡಿಸಿದರು. ಸ್ನೇಹಿತರು ಬಾಕಿ ದಿವಸಗಳಲ್ಲಿ ಹೇಗೇ ಇರಲಿ ಇವತ್ತಾದರೂ ಗಾಂಧೀಜೀಯ ಜೀವನ ತತ್ವಗಳ ವಿಚಾರ ವಿಮರ್ಶೆ ಮಾಡ್ತಾ ಆತನನ್ನು ಕೊಂಚ ಜ್ಞಾಪಿಸಿಕೊಳ್ಳೋದರ ಬದಲಿಗೆ ಹೀಗೆ ದೊಂಬಿದಾಸರ ಹಾಗೆ ಮೋಜಿನಲ್ಲಿವೆಯಲ್ಲ ಇವು ಎನ್ನಿಸಿತು. ಪ್ರಾಣೇಶನಿಗೆ ಹಾಗಂತ ಹೇಳೋದೇ ತಡ ಮೇಷ್ಟರೆಲ್ಲ ಸೂರು ಕಿತ್ತುಹೋಗುವ ಹಾಗೆ ನಕ್ಕರಂತೆ. ಟೆನ್ನಿಸ್ ಮ್ಯಾಚು ತಪ್ಪಿ ಹೋಯಿತು ಅಂತ ಒಬ್ಬರ ಪಶ್ಚಾತ್ತಾಪವಾದರೆ, ಮ್ಯಾಟಿನಿ ಪ್ರೋಗ್ರಾಂ ನೆಗೆದು ಬಿತ್ತು ಅಂತ ಇನ್ನೊಬ್ಬರ ಗೋಳು. ಫ್ರೆಂಡ್ಸ್‌ನ ಕರೆದಿದೀನಿ ಬೇಗನೆ ಹೋಗಬೇಕು ಈ ಭಾಷಣದ ಬೋರಿಂಗು ಎಷ್ಟುದ್ದ ಹೋಗುತ್ತೋ ಎಂದು ಮತ್ತೊಬ್ಬರು ಚಡಪಡಿಸುತ್ತಿದ್ದರು. ಹೀಗಿರುತ್ತಾ ಇವರೆಲ್ಲ ಯಾತಕ್ಕೆ ಇಲ್ಲಿ ಬಂದು ಕಾಯುತ್ತಿದ್ದಾರೆ ಎಂದು ಕೇಳಬಹುದು. ಪ್ರಿನ್ಸಿಪಾಲರ ಕಟ್ಟಾಜ್ಞೆ ಹಾಗಿತ್ತು, ಅಷ್ಟೆ. 'ಅಲ್ಲದೆ ಇದ್ದರೆ ನೀವೆಲ್ಲ ಇಲ್ಲಿರೋದು ಅಷ್ಟರಲ್ಲೇ ಇತ್ತು' ಎಂದರು ಹಿರಿಯ ಮೇಷ್ಟರು.

"ಎಲ್ಲರೆದುರಿಗೆ, ಅದರಲ್ಲೂ ಪರಕೀಯರೊಬ್ಬರಿದ್ದಾರೆ. ಇಲ್ಲಿ ಅವರ ಎದುರಿಗೆ ನಮ್ಮ ಮರ್ಯಾದೆ ತೆಗೆಯಬೇಡಿ ಸಾರ್" ಎಂದ ಒಬ್ಬ ಎಳೆ ನಿಂಬೆಕಾಯಿ.

"ನಾನಂತೂ ಬಂದೇ ಬರುತ್ತಾ ಇದ್ದೆ. ಸೊಗಸಾದ ಟಿಫನ್ ಆರ್ಡರಾಗಿದೆ ಅಂತ ವೈಕುಂಠ ಭವನದ ಮಾಣಿ ನೆನ್ನೇನೇ ಹೇಳಿದ್ದ." ಎಂದರು ಯಾರೋ ಮೂಲೆಯಿಂದ.

ಆ ಹೈಕಳೇ ವಾಸಿ ಎನಿಸುವಷ್ಟರ ಮಟ್ಟಿಗೆ ಮಾತು ಕತೆ ನಡೆಯಿತು, ಅಷ್ಟರಲ್ಲಿ ಸಭೆ ಪ್ರಾರಂಭವಾಗುವುದಕ್ಕಾಯಿತು. ಸಭಾಗೃಹ ಕಿಕ್ಕಿರಿದಿತ್ತು — ಪೇಪರುಗಳಲ್ಲಿ ಹೇಳುವಂತೆ. ಸಂತೆಯ ಕೋಲಾಹಲವನ್ನು ನಾಚಿಸುವ ಕೋಲಾಹಲ. ಆದರೂ ಇಷ್ಟೊಂದು ಮಂದಿ ರಜಾ ದಿನವಾದರೂ ಇಲ್ಲಿ ಬಂದು ನೆರೆದಿದ್ದಾರಲ್ಲ ಅಂತ ಸಂತೋಷವಾಯಿತು ಪ್ರಾಣೇಶನಿಗೆ. ಹಾಗಂತ ಆತ ಪಕ್ಕದಲ್ಲಿದ್ದವರೊಡನೆ ಹೇಳಿದ. ಅದಕ್ಕವರು ಹೇಳಿದರು—"ಅಯ್ಯೋ, ಅದೇನಂತೀರ ಇವತ್ತು ಹಾಜರಿರದಿದ್ದರೆ ನಾಳೆ ಹಾಜರಿ ವಜಾ ಅಂತ ಮಾಡಿದ್ದೇವೆ. compulsory attendance ಅಂತ ಮಾಡಿದ್ದರಿಂದ ಇಷ್ಟು ಮಂದಿ ಬಂದರು," ಹೀಗೆಂದು ನಗತೊಡಗಿದರವರು. ಬುದ್ಧಜಯಂತಿ ಮಾಡಿದಾಗ ಎಂಟುನೂರು ಹೈಕಳಿರುವ ಕಾಲೇಜಿನಲ್ಲಿ ಕೇವಲ ಎಂಟೇ ಮಂದಿ ಬಂದಿದ್ದರಂತೆ ! ಸಾಕೆ ?

ಭಾಷಣಕಾರರು, ಪ್ರಿನ್ಸಿಪಾಲರು ಇವರ ನಡುವೆ ಒಬ್ಬ ಯುವಕ—ಹೀಗೆ ವೇದಿಕೆ ಅಲಂಕೃತವಾಯಿತು. ಅತಿಥಿಗಳು ಹೇಗೂ ಖಾದಿಧಾರಿಗಳು. ಪ್ರಿನ್ಸಿಪಾಲರು ಅಂಥ ಸಂದರ್ಭಗಳಿಗೆಂದು ಒಂದು ಖಾದಿ ಅಂಗಿ ತೆಗೆಸಿಟ್ಟಿದ್ದರು. ಯುವಕ ಯೂನಿಯನ್ ಕಾರ್ಯದರ್ಶಿ ; ಭರ್ಜರಿ ಸೂಟು ಬೂಟು ಟೈಗಳಲ್ಲಿದ್ದ. ಆತನ ಕೈಯಂತು ಹೊಸತಾಗಿ ಬೆಳೆಸಿದ ಅಳೂಪ ಕುಮಾರ್ ಮೀಸೆಯ ಮೇಲೆಯೇ,

" ನೋಡಿದಿರ ಅವನ ಡ್ರೆಸ್ಸು ? " ಎಂದರಂತೆ ಪಕ್ಕದ ಹಳಬರೊಬ್ಬರು.

" ಇರಲಿ ಬಿಡಿ ; ಗಾಂಧೀಜಿ ಇಂಡ್ಯಾಕ್ಕೆ ಬರೋ ಮುಂಚೆ ಹಾಗೇ ಇರಲಿಲ್ಲವೆ ? " 'ಅಂತ ಸಮಾಧಾನ ಹೇಳಿದರು ಇನ್ನೊಬ್ಬರು.

ಸಭೆಯ ಕಾರ್ಯಕಲಾಪಗಳು ಪ್ರಾರಂಭವಾದುವು.

ಪ್ರಾರ್ಥನೆ ಅಂತ ಇದೆಯಲ್ಲ. ಅದಕ್ಕಾಗಿ ಒಬ್ಬ ಬಾಲೆ ವೇದಿಕೆಯೇರುವಾಗ ವಿದ್ಯಾರ್ಥಿಸಮುದಾಯದಿಂದ ಒಕ್ಕೊರಲಿನ ಉತ್ತೇಜಕ ಧ್ವನಿ. ಸೂರು ಬೀಳುವಂತೆ ಡೆಸ್ಕ್ ತಾಡನ. ಆಕೆಗೆ ಗಂಟಲೇ ಹೊರಡಲಿಲ್ಲ. ಹೇಗೋ ಕಷ್ಟದಿಂದ ತನ್ನ ನಡುಕದ ಗೋಳ್ಗೀತೆಯನ್ನು ಮುಗಿಸಿದಳು.

" ಆಕೆ ಸೊಗಸಾಗಿ ಹಾಡುತ್ತಾಳೆ, ಬೇರೆ ಕಡೆಗಳಲ್ಲಿ ಕೇಳಿದೇನೆ. ಆದರೆ ಇಲ್ಲಿ ಯಾವಾಗಲೂ ಹೀಗೆ. ಈ ಪುಂಡರ ಉತ್ತೇಜನ ಆಕೆಗೆ ಸಾಕುಸಾಕೆನಿಸುತ್ತದೆ "— ಎಂದರು ಪಕ್ಕದವರು.

ಅನಂತರ ಕಾರ್ಯದರ್ಶಿ ತಾನು ಬರೆದು ತಂದ ಸ್ವಾಗತ ಭಾಷಣವನ್ನೋದಿದ. ಬಹಳ ಉದ್ದವಿದೆಯೋ ಎಂದು ಶಂಕಿಸುವಷ್ಟರಲ್ಲಿ ಭಾಷಣ ಮುಗಿಸಿದ ಜಾಣ. ನಾಲ್ಕೇ ಸಾಲು ಬರೆಸಿ ತಂದಿದ್ದ. ಬರಕೊಟ್ಟವರು ಒಂದೆರಡು ಉದ್ದುದ ಶಬ್ದಗಳನ್ನು ಸೇರಿಸಿದ್ದರಿಂದ ತುಂಬ ಗೋಳಾಯಿತು. ಆದರೂ ಇಂಗ್ಲೀಷರನ್ನು ಓಡಿಸಿದ್ದ ಗಾಂಧೀಜಿಗೆ ತಕ್ಕುದಾದ ಇಂಗ್ಲೀಷ್ ಭಾಷಣ ಎಂದು ಪಕ್ಕದವರು ಅಭಿಪ್ರಾಯಪಟ್ಟರು.

ಆದರೂ ವೇದಿಕೆ ಹತ್ತಿ ಇಂಥ ಭಾಷಣಮಾಡುವ ಸುಯೋಗಕ್ಕಾಗಿ ಸೆಕ್ರೆಟ್ರಿಯಾಗಲು ಆತ ಎಷ್ಟೊಂದು ಹೆಣಗಿದ್ದನೋ ಎಂಬುದನ್ನು ನೆನೆಸಿ ಜುಮ್ಮೆನಿಸಿತಂತೆ ಪ್ರಾಣೇಶನಿಗೆ.

ಪಕ್ಕದ ಸ್ನೇಹಿತರಿಗೆ mind reading ಗೊತ್ತೆ ? " ಈತನ ಚುನಾವಣೆಯ ಹೊತ್ತಿಗೆ ನಡೆದ ಗಂಡಾಗುಂಡಿ ಸಾಧಾರಣದ್ದಲ್ಲ ಸ್ವಾಮಿ " ಎಂದರು.

" ಬೇಕಲ್ಲ ಸ್ವಾಮಿ ಮುಂದೆ ? ಡಿಮಾಕ್ರಸಿ ಅಂದಮೇಲೆ ಕಾಲೇಜು ಬಿಟ್ಟ ಮೇಲೂ ಇಲೆಕ್ಷನ್ ಗಿಲೆಕ್ಷನ್ ಅಂತ ಇದೆಯಲ್ಲ. ತಯಾರಿ ಈಗಲೇ ಸಿಕ್ಕರೆ ಅನುಕೂಲ."

ಅಷ್ಟರಲ್ಲಿ ಭಾಷಣಕಾರರು ಎದ್ದು ನಿಂತರು. ಅವರ ದಡೂತಿ ದೇಹ ನೋಡಿಯೇ ಏನೋ ಗುಲ್ಲೆಬ್ಬಿಸುತ್ತಿದ್ದ ಹೈಕಳೆಲ್ಲ ಒಂದು ಕ್ಷಣ ತಣ್ಣಗಾದರು. ಭಾಷಣಕಾರರು ತಮ್ಮ ಭಾಷಣ ಕೊಡಲು ಒಪ್ಪಿದ್ದಕ್ಕೆ ಕಾರಣವನ್ನು ಕಾಲುಃ ಗಂಟೆ ವಿವರಿಸಿ, ಗಾಂಧೀಜಿ ಯವರ ಆಶ್ರಮದಲ್ಲಿ ಅವರನ್ನು ಐದು ನಿಮಿಷಕಾಲ ಕಂಡಿದ್ದನ್ನು ಹದಿನೈದು ನಿಮಿಷ ವಿವರಿಸಿ, ಪರದೇಶಗಳಲ್ಲಿ ಗಾಂಧೀ ದೇಶದವನೆಂದರೆ ಏಕೆ ಕಾಲು ಹಿಡಿಯಲು ಬರುತ್ತಾರೆ ಎಂಬುದನ್ನು ಮತ್ತೆ ಹದಿನೈದು ನಿಮಿಷ ವರ್ಣಿಸಿ, ಸತ್ಯ ಅಹಿಂಸೆಗಳ ರಸಾಯನ ವನ್ನು ಅರವತ್ತು ನಿಮಿಷ ಕಾಲ ಸುರಿಸಿ, ಕೊನೆಯದಾಗಿ ಈ ರೀತಿ ಕಿರಿಯರು ನೆರೆದಿದ್ದನ್ನು ಕಂಡರೆ ಈ ದೇಶ ಗಾಂಧೀಜಿ ತೋರಿಸಿಕೊಟ್ಟ ದಾರಿಯಲ್ಲಿ ನಡೆಯುವುದು ಖಂಡಿತ ಏಕೆಂದರೆ ಅವತ್ತು ಬೆಳಿಗ್ಗೆ ಅವರು ಹೋಗಿದ್ದ ಇನ್ನೊಂದು ಸಭೆಯಲ್ಲಿ ಕೇವಲ ಇಪ್ಪತ್ತು ಮಂದಿ ಮುದುಕರು ಮಾತ್ರ ನೆರೆದಿದ್ದರಂತೆ.

ಒಳಗೊಳಗೆ ಪ್ರಾಣೇಶ 'ಅಯ್ಯೋ' ಎಂದು ಕನಿಕರಿಸಿದ. ಈ ಕಿಕ್ಕಿರಿತದ ಗುಟ್ಟು ಮೊದಲೇ ಹೇಳಿಲ್ಲವೆ?

ಆಮೇಲೆ ಅಧ್ಯಕ್ಷರ ಭಾಷಣ. ಅವರು ಆಹಾರ ಪಾನೀಯಗಳ ಕುರಿತು ಸ್ವಲ್ಪ ನಿಗಾ ಇಟ್ಟುಕೊಳ್ಳಬೇಕಾದ ಕಾಯಿಲೆಯಿಂದ ನರಳುತ್ತಿರಬೇಕು. ಉಣ್ಣುವ ತಿನ್ನುವ ಕುರಿತು ಗಾಂಧೀಜಿ ಹೇಳಿದ್ದನ್ನೆಲ್ಲ ಚೆನ್ನಾಗಿ ಓದಿಕೊಂಡಿದ್ದರು. ಆ ಕುರಿತು ಅವರು ಒಂದು ತಾಸಿಗೂ ಮೀರಿ ಮಾತನಾಡುವವರಿದ್ದರೋ ಏನೋ. ಸಭಿಕರ ಹಿಂಡು ಡೆಸ್ಕ್ ತಾಡನದಿಂದ ಅದನ್ನು ಅರ್ಧಕ್ಕೆ ನಿಲ್ಲಿಸಿತು.

ಆ ಮೇಲೆ ಪ್ರಿನ್ಸಿಪಾಲರು ಇಸ್ತ್ರಿಮಾಡಿದ ಕರವಸ್ತ್ರದಿಂದ ಒಂದು ಪುಟ್ಟ ಗರಮಾಗರಂ ಭಾಷಣ ಮಾಡಿದರು.

ಅನಂತರ ಪ್ರಾರಂಭವಾಯಿತು ಮನರಂಜನೆಯ ಕಾರ್ಯಕ್ರಮ.

ಹುಡುಗಿಯರು ಕೆಲವರು ಗಾಂಧೀಜಿಗೆ ಪ್ರಿಯವಾದ ಹಾಡುಗಳನ್ನು ಹಾರ್ಮೋನಿಯಂ ಸದ್ದಿನೊಡನೆ ಕ್ರೂರವಾಗಿ ಹಾಡಿದರು. ಕೆಲವಂತೂ ಕೇವಲ ಗೋಳು ಕರೆಗಳೇ ಆಗಿದ್ದವು. ಹೋದೆಯಾ ಗಾಂಧಿ ಎಂಬ ಪದ ಕೇಳಿ ಕಣ್ಣೀರು ಸುರಿಸೋಣ ಎಂದರೆ ನೀರೇ ಬರಲಿಲ್ಲವಂತೆ

ಆಮೇಲೆ ಗಾಂಧೀಜಿ ಜೀವನ ಚರಿತ್ರೆಯನ್ನು ಲಾವಣಿ ರೂಪದಲ್ಲಿ ಹಾಡಿದ ಒಬ್ಬಾತ, ಬೂಟಿನ ಕಾಲಿನಲ್ಲಿ ತಾಳ ಕುಟ್ಟುತ್ತ. ಮರುಕ ಹುಟ್ಟಿಸುವ ಪದ. ಅವನ ಹಿಂದೆ ಗೋಡೆಗೆ ತೂಗಿಬಿಟ್ಟ ಗಾಂಧೀಜಿಯ ಪಠವನ್ನು ನೋಡಿದರೆ ಮುಖದಲ್ಲಿ ಧಿಕ್ಕಾರದ ಭಾವನೆಯನ್ನು ಮೂಡಿಸಿದಂತೆ ಕಾಣುತ್ತಿತ್ತು. ಬರೆದ ಚಿತ್ರಕಾರ ಯಾರೊ!

ಹೈಕಳೆಲ್ಲ ಗೊಂದಲ ಮಾಡಿ ಹೊರಡುವ ತನಕ ಮೈಮರೆತು ಆ ಚಿತ್ರವನ್ನು ನೋಡುತ್ತಿದ್ದವಂತೆ, ಸಭೆ ಮುಗಿಯಿತು. ಭಾಷಣದಯ್ಯನವರನ್ನು ಕೂಡಿಕೊಂಡು ಎಲ್ಲರೂ ವೈಕುಂಠಭವನದ ಟಿಫನ್ ಹೊಡೆದರು ಪಟ್ಟಾಗಿ.

ಅಷ್ಟಕ್ಕೆ ಮುಗಿಯಿತೆ ಗಾಂಧೀಜಿ ಪುಣ್ಯ ದಿನಾಚರಣೆ ? ಇಲ್ಲ ಇಲ್ಲ. ರಾತ್ರಿ "ಕುಳ್ಳಿ ಮದ್ವೆ" "ಕೈಹಿಡಿದ ಕಾಮಿನಿ" ಎಂಬ ನಾಟಕಗಳಿವೆಯಂತೆ ವಿದ್ಯಾರ್ಥಿಗಳಿಂದ. ಇಷ್ಟೆಲ್ಲ ತಿಳಿಸಿ, " ಈಗ ಹೇಳು ಇವತ್ತಿನ ದಿನಾನ ಗಾಂಧೀಜಿ ಜನ್ಮದಿನ ಅರ್ಥಾತ್ ಸತ್ತು ಹುಟ್ಟಿದ ದಿನ ಅಂತ ಯಾಕೆ ತಿಳೀಬಾರದು ?" ಎಂದು ಸವಾಲು ಹಾಕಿದ ಪ್ರಾಣೇಶ.

ಇದಕ್ಕೆ ಉತ್ತರಕೊಡಬೇಕಾದರೆ ಕೊಂಚ ಯೋಚಿಸಿಕೊಳ್ಳಬೇಕಾಗುತ್ತೆ ಅಲ್ವೆ ?

ಅಮ್ಮಸಂದ್ರದಲ್ಲಿ ಅಮ್ಮೈಯ್ಯ ಇರುವಳು
" ಔನು ಔನು " ಅಷ್ಟೇ ಅವಳ ತೆಲುಗು ಜ್ಞಾನವು
ಗುಂಟೂರಿನಿಂದ ಬಂದ ಒಬ್ಬ
ಪೆಂಡ್ಲಿ ಬಿಡ್ಡ ನೀವೆ ಏನಾ
ಎಂದು ಕೇಳಿದಾಗ ಈಕೆ ಔನು ಔನು ಅಂದಳು.

* * * *

ಆಕಾಶದಲ್ಲಿತ್ತು ಉಯ್ಯಾಲೆ ಜೋಡಿ
ಆಡುತಿದ್ದ ರದರಮೇಲೆ ಗಂಡು ಹೆಣ್ಣು ಓಡಿ
ಎಷ್ಟೇದೂರ ಹಾರಿದರೂ
ಕಷ್ಟ ಪಟ್ಟು ಕುಣಿದರೂ
ಹಿಡಿದು ಗಂಡ ತೊಡಿಸುತಿತ್ತು ಹೆಣ್ಣುಮೋಡಿ !

* * * *

ಲಂಕೆಯಲ್ಲಿ ಹಿಂದೆ ಇದ್ದ ರಾವಣಾಸುರ
ಬಳ್ಳಿಯಂತೆ ಹಬ್ಬಿಸಿದ್ದ ಮೀಸೆಯನ್ನವ
ಎಣ್ಣೆ ಹಚ್ಚಿ ಮಿಂಚಿಸುತ್ತ
ಬೆಣ್ಣೆ ಬಳಿದು ಹೊಳಪಿಸುತ್ತ
ಮೀಸೆ ಹಿಡಿದು ಮಂಡೋದರಿ ಕಳೆದಳಯ್ಯ ಬಾಳ.

* * * *

ಕುಂಬಳ ಕಾಯಿನ ಬೀಜ ಗಳನ್ನೇ
ಶಂಭುವು ತಿಂದು ತೇಗುತಲಿದ್ದ
ಕಂಬದ ಕಾಲು ಬಳ್ಳಿಯಂತಾಯ್ತು
ಕುಂಭಗಳಂತೆ ಮೈಯಾಯ್ತು.

ಗಸಗಸೆ ಪಾಯಸ

(ಗಂಡಸರಿಗೆ ಮಾತ್ರ)

ಜಿಹ್ವಾ ಚಾಪಲ್ಯ ಕೆಟ್ಟದ್ದು. ಅದು ಬ್ರಹ್ಮಚಾರಿಗಳಿಗೆ ಬಂದರೆ ಇನ್ನೂ ಕೆಟ್ಟದ್ದು. ಅಡಿಗೆ ಬರದೇ ಇದ್ದ ಬ್ರಹ್ಮಚಾರಿಗೆ ಬಂದರೆ ಬ್ರಹ್ಮನೇ ಕಾಪಾಡಬೇಕು. ಇಂಥಾ ಅವೇಳೇಲಿ ನನ್ನ ಸ್ನೇಹಿತ ಬ್ರಹ್ಮಚಾರಿ ಸುಂದ್ರೂಗೆ ಗಸಗಸೆ ಪಾಯಸ ತಿನ್ನ ಬೇಕು ಅನ್ನಿಸ್ತು. ಅವನಿಗೆ ನಾನು ಗುರು. ನನಗೆ ಅವನೇ ಗುರು ಅಡಿಗೆ ಕೆಲಸದಲ್ಲಿ! 'ನನಗೆ ಬರೋಲ್ಲ' ಅಂತ ಏಕೆ ಹೇಳ್ಕೊಳ್ಳಿ. ಪಾಯಸ ಮಾಡೋಣಾಂತ ಮಿಾಸೆ ತಿರುವಿದೆ (ವರಳಿನಲ್ಲಿಲ್ಲ!) ಸಾಮಾನಿನ ಪಟ್ಟಿ ಅವನ ಕೈಲಿಟ್ಟೆ. ಅವತ್ತೇ ಸಂಜೆ ಸಾಮಾನೆಲ್ಲಾ ತಂದಿಟ್ಟ ಪುಣ್ಯಾತ್ಮ.

ಅದೇ ರಾತ್ರಿ ಗಸಗಸೆ ನೆನೆಹಾಕ್ದ. ಗೋಡಂಬಿ. ದ್ರಾಕ್ಷಿ (ಅರ್ಧ ಪಾವು ಗಸಗಸೇಗೆ, ಒಂದು ಸೇರು ಗೋಡಂಬಿ, ಒಂದು ಸೇರು ದ್ರಾಕ್ಷಿ, ಒಂದು ಸೇರು ಬಾದಾಮಿ, ಒಂದು ಸೇರು ಗೇರುಪೊಪ್ಪು—ಇದೆಲ್ಲಾ ವಯಸ್ಕರಾದವರಿಗೆ ಕಲಿಸುವ ಅಡಿಗೆ ಪುಸ್ತಕದಲ್ಲಿದೇರಿ!) ಲವಂಗ, ಯಾಲಕ್ಕಿ, ಪಚ್ಚಕರ್ಪೂರ, ಕೇಸರಿ ಇತ್ಯಾದಿ ರೆಡಿ ಮಾಡ್ಕೊಂಡ—ಮಾರನೇ ದಿನ ಅಖಾಡಕ್ಕೆ ಇಳಿಯೋಕ್ಕೆ!

ಬೆಳಿಗ್ಗೆ ಬೇಗೆದ್ದು ಮುಖ ತೊಳೀದೇನೆ ಸ್ಟೌ ಹಚ್ಚಿದ. ಅದರ ಮೇಲೆ ಗಸಗಸೆ ನೆನೆಹಾಕಿದ್ದ ಪಾತ್ರೇನೆ ಇಟ್ಟ—ಕುದೀಲೀಂತ. ಗಂಟೆ ಒಂದಾಯ್ತು, ಎರಡಾಯ್ತು, ಮೂರಾದ್ರೂ ಅದು ಬೇಯ್ಲಿಲ್ಲ, ನನಗೆ ಬಂದು ಹೇಳ್ದ. ನನ್ನ ಅಜ್ಞಾನ ಏಕೆ ತೋರ್ಪಡಿಸಿಕೊಳ್ಳಲಿ! "ಸರಿಯಾಗಿ ಆ ಪಾತ್ರೆಮೇಲೆ ಮುಚ್ಚಿ ಭಾರವಾದ್ದೇನಾದ್ರೂ ಆ ಪ್ಲೇಟಿನಮೇಲೆ ಹೇರಿ, ಸ್ಟೌ ಪಂಪು ಜಾಸ್ತಿ ಮಾಡಿ ಅದರಮೇಲೆ ಪಾಯಸ ಯಾವಾಗಾಗುತ್ತೊ ಅಂತ ಕಣ್ ಹಾಕ್ದೆ, ಅಡಿಗೆ ಮನೆ ಬಾಗಿಲ್ಹಾಕ್ಕೊಂಡು ಬಾ—ಮೂವತ್ತು ನಿಮಿಷ ಬಿಟ್ಟು ಹೋಗಿ ನೋಡು. ಬೆಂದಿರುತ್ತೆ" ಅಂತ ಅಂದಿದ್ದಕ್ಕೆ ಅವನು ಹಾಗೇ ಮಾಡ್ದ. ಆದರೂ ಬೆಂದಿರಲಿಲ್ಲ. ನನ್ನ ಮುಖ ಮುಖ ನೋಡ್ದ.

"ಪೆಕರ, ನನ್ನ ಮುಖ ಯಾಕೆ ನೋಡ್ತಿ? ಇನ್ನೊಂದು ಸ್ಟೌ ಹಚ್ಚು. ಬಾಂಡಲೆ ಇಡು. ತುಪ್ಪ ಹಾಕು. ಅದು ಕಾಯುತ್ತಲೂ ಗೋಡಂಬಿ ದ್ರಾಕ್ಷಿ ಇತ್ಯಾದೀ ಮಸಾಲೇನ ಕೆಂಪಗೆ ಆಂಗ್ಲೋ ಇಂಡಿಯನ್‌ರ ಮುಖದ ಬಣ್ಣದ ಹಾಗೆ ಹುರಿ. ಆ ಮೇಲೆ ಅವನ್ನೆಲ್ಲಾ ಗಸಗಸೇ ಪಾತ್ರೆಗೆ ಬೆರಸಿ, ಒಂದು ಸೇರು ಹಾಲು ಹಾಕು, ಎರಡು

ಚಿಟಿಕಿ ಸಕ್ಕರೆ ಹಾಕು (ಸಕ್ಕರೆ ಅಭಾವ ಇರೋದ್ರಿಂದ) ಸೌಟಿಂದ ಗೊಟಕಾಯಿಸಿ, ಲೊಟ್ಟೆ ಹೊಡೀತಾ ಕೆಳಗಿಡು ಆಮೇಲೆ ಹತ್ತು ನಿಮಿಷ ಬಿಟ್ಟು ಆರಿದಮೇಲೆ ತೊಗೊಂಡು ಬಾ " ಅಂತ ಬಾಲಭೋದಿಸಿದೆ !

ಹಾಗೇ ಮಾಡಿ ಲೊಟ್ಟೇ ಹೊಡೀತಾ, " ಪ್ಯಾರ್ ಕಿಯಾತೋ ಡರ್‌ನಾ ಕ್ಯಾ ಎ ಎ ಎ " ಅಂತ ಗುಂಯಿಗುಡ್ತಾ ನನ್ನ ಪರಮ ಶಿಷ್ಯ ಬಂದೇ ಬಿಟ್ಟ.

ಆಗಲೂ ಗಸಗಸೆ ಬೆಂದಿರಲಿಲ್ಲ !

" ಲೋ ಸುಂದ್ರ, ಬಡ್ಡಿಮಗನ ಅಂಗಡೀಲಿ ಸರಿಯಾದ ಗಸಗಸೆ ಇಲ್ಲ ಕಣೋ. ಬರೀ ದಗಾ, ಮೋಸ, ಇನ್ಮೇಲೆ ಅವನಂಗಡೀಗೂ ಹೋಗ್ಬಾರ್ದು ಹಳೇ ಬಾಕೀನೂ ಕೊಡಬಾರ್ದು" ಅಂತ ಅಂಗಡಿಯೋನ್ನೂ ಪಾಪ ಆ ಗಸಗಸೇನ್ನೂ "ಛೀಮಾರಿ" ಮಾಡಿವೆವು.

" ಅದಿರಲಿ ಈಗೇನ್ಮಾಡೋದೋ ಆಫೀಸಿಗೆ ಹೊತ್ತಾಯ್ತು " ಅಂದ ಸುಂದ್ರ.

" ಮಾಡೋದೇನು ಪಾತ್ರೆ ನಮ್ಮಿಬ್ಬರ ಮಧ್ಯೆ ಇಡು " ಅಂದೆ. ಅವನಿಟ್ಟ.

ಇಬ್ಬರೂ ಒಟ್ಟಿಗೆ ಪಾತ್ರೆ ಒಳಗೆ ಸೀದಾ ಕೈ ಹಾಕಿ ಸಿಕ್ಕಿದಷ್ಟು ಗೋಡಂಬಿ, ದ್ರಾಕ್ಷಿ, ಗೇರುಪೊಪ್ಪು ಇವುಗಳನ್ನೆಲ್ಲಾ ಆ ಪಾತ್ರೆಯಿಂದ ಮಂಗಮಾಯಿಸಿದೆವು ! ನಮ್ಮ ಕೈಗೆ ಒಂದಾದರೂ ಗಸಗಸೆ ಕಾಳು ಅಂಟಿದ್ದರೆ ಕೇಳಿ ! ಗಸಗಸೇಗೂ ಅವನಂಗ ಡೀಗೂ ಇನ್ನೂ ಶಪಿಸಿದೆವು.

ಅಷ್ಟೊತ್ತಿಗೆ ಪೋಸ್ಟ್‌ಮನ್ ನನಗೊಂದು ಕಾಗದ ಕೊಟ್ಟ. 'ಗಸಗಸೆ ಪಾಯಸ ಹೇಗೆ ಮಾಡೋದು ?' ತಿಳಿಸು ಅಂತ ನಮ್ಮ ಪ್ರೇಮಂಗೆ ಕಾಗದ ಬರೆದಿದ್ದೆ ಆ ಕಾಗದದ ಪ್ರಕಾರ—" ಗಸಗಸೇನಾ ನಾವು ತಿರುವು"ಬೇಕಾಗಿತ್ತು. ಕಾಗದ ಓತ್ತಾ ಓತ್ತಾ ನಾನು ಸುಂದ್ರು ನಮ್ಮ ವಿವೇಕ ತಡೀಲಾರ್ದೆ ಕುಕ್ಕರಿಸಿದೆವು.

ಆದರೂ ಧೈರ್ಯಗೆಡದೆ ಮಾರನೇ ದಿನ ಉಳಿದಿದ್ದ ಗಸಗಸೇನೆಲ್ಲಾ, ಅಂಗಡಿ ಯೋನ್ನೂ, ಗಸಗಸೇನ್ನೂ ಬಯ್ಯದೇ, ಇಬ್ಬರೂ ಸೇರ್ಕೊಂಡು ತಿರುವಿ ಪಾಯಸ ಮಾಡಿ ಕುಡಿದೇ ಬಿಟ್ವು.

" ಈ ತರಹ ಎರಡು ದಿನ ಮಾಡಬೇಕಾದ ಪಾಯಸ—ವಾರದ ಸ್ಪೆಶಲ್ ಅಡಿಗೆ ಕಾಲಂನಲ್ಲಿ ಯಾವುದಾದರೂ ವಾರ ಪತ್ರಿಕೆಗೆ ಕಳಿಸೋ " ಅಂತ ಸ ಂದ್ರ ಕುಮ್ಮಕ್ ಕೊಟ್ಟ. ಅಂತೆಯೇ ಬರೆದಿದ್ದೇನೆ.

—ಹಾ. ಮ್ಯ. ಸೂರಿ.

★ ★ ಕಣ್ಣಿಲ್ಲದ ಪರದೇಸಿ ಶಿವಾ ★ ★

★

ಗುಬ್ಬಿನೆಲೆ ಉಕ್ಕಡದಿಂದ ನೂರು ಗಜಗಳ ದೂರದಲ್ಲಿ ರಸ್ತೆಯ ಪಕ್ಕದಲ್ಲಿ ಆ ಕುರುಡ ನಿಂತಿದ್ದ. "ಕಣ್ಣಿಲ್ಲದ ಪರದೇಶಿ ಶಿವಾ ; ಶಿವನೇ ಭಗವಂತ ತಾಯಿ ತಂದೆ ಶಿವಾ !" ಅಂತ ಬಸ್ಸಿನ ಅಥವಾ ಲಾರಿಯ ಶಬ್ದ ಬಂದರೆ ಕೂಗುತ್ತಾ ಇದ್ದ. ಲಾರಿಯೇನಾದರೂ ನಿಂತು, ಅದರಿಂದ ಕಂಡಕ್ಟರನು ಇಳಿದು ಬಂದು "ಏನಪ್ಪಾ ! ಚಂದಾಗಿದೀಯಾ" ಅಂತ ಕೇಳಿದರೆ, ಕುರುಡ "ನಿಮ್ಮ ದಯೆಯಿಂದ ಚೆನ್ನಾಗಿ ದೀನಪ್ಪಾ ! ಏಸಾರ, ಶಿವಾ ! ಕೊಡಪ್ಪ" ಅಂತ ಹೇಳುತ್ತಿದ್ದ. ಲಾರಿಯವನು ಹತ್ತು ರೂಪಾಯನ್ನು ಕುರುಡನ ಕೈಗೆ ಇಟ್ಟರೆ, ಕುರುಡ ಗಟ್ಟಿಯಾಗಿ. ನೋಟನ್ನು ತಡವರಿಸುತ್ತ,

"ಕಣ್ಣಿಲ್ಲಾದ ಪರದೇಶಿ ಶಿವಾ
ಶಿವನೇ ಭಗವಂತ, ತಾಯಿ ತಂದೆ ಶಿವಾ"

ಎಂದು ಉಕ್ಕಡಕ್ಕೆ ಕೇಳುವ ಹಾಗೆ ಕೂಗುತ್ತಿದ್ದ. ಲಾರಿ ಮುಂದಕ್ಕೆ ಸಾಗುತ್ತಿತ್ತು. ಉಕ್ಕಡದ ಹತ್ತಿರ ಲಾರಿಯು ನಿಂತು, ಆಗಬೇಕಾದ ತನಿಖೆಯು ಬಲು ಬೇಗ ಮುಗಿದು, ಮುಂದಕ್ಕೆ ಅದು ಸಾಗುತ್ತಿತ್ತು.

ಮಸಲಾ ಲಾರಿಯು ಕುರುಡನ ಹತ್ತಿರ ನಿಲ್ಲದೆ ಮುಂದಕ್ಕೆ ಸಾಗಿದರೆ

"ಕಣ್ಣಿಲ್ಲಾದ ಪರದೇಶಿ ಶಿವಾ"
"ಶಿವನೇ ಭಗವಂತ ಅತ್ತೆ ಮಾವ, ಶಿವಾ !"

ಎಂದು ಬೊಬ್ಬೆ ಇಡುತ್ತಿದ್ದ. ಉಕ್ಕಡದ ಹತ್ತಿರ ಲಾರಿಯು ನಿಂತಾಗ, ತನಿಖೆಯು ಕಠಿಣವಾಗಿ, ಕಟ್ಟುನಿಟ್ಟಾಗಿ ಸಾಗುತ್ತಿತ್ತು. ಲಾರಿಯಲ್ಲಿ ಪೇರಿಸಿದ್ದ ಚೀಲ ಒಂದೊಂದನ್ನೂ ಕಣ್ಣಲ್ಲಿ ಕಣ್ಣಿಟ್ಟುಕೊಂಡು ಪರೀಕ್ಷಿಸಿ, ಉಕ್ಕಡದ ಸಿಬ್ಬಂದಿಯವರು ಕಾರ್ಯ ನಿರ್ವಹಿಸಿ, ಲಾರಿಯವರ ಕಣ್ಣಲ್ಲಿ ನೀರು ಹಾಗಿರಲಿ, ರಕ್ತ ಸುರಿಯುವ ತನಕ ಸುಂಕ ಸೆಳೆದುಬಿಡುತ್ತಿದ್ದರು.

ಅಡಗೂಲಜ್ಜಿ ಕತೆಗಳ ಮುಕ್ತಾಯದಲ್ಲಿ ಹೇಳುವಂತೆ "ಆ ಮೇಲೆ ಎಲ್ಲರೂ ಸುಖವಾಗಿ ಇರುತ್ತಿದ್ದರು.

* * * *

ಆದರೆ ಪ್ರಜಾಪ್ರತಿನಿಧಿಗಳಿರುವ ವಿಧಾನಸಭೆಯಲ್ಲಿ ಎಲ್ಲರೂ ಸುಖವಾಗಿರಲು ಸಾಧ್ಯವೇ ? " ಉಕ್ಕಡದವರು ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸ್ತಾ ಇದಾರೆ, ನಿಮ್ಮ ಸರ್ಕಾರ ಏನು ಮುತುವರ್ಜಿ ವಹಿಸಿ ಈ ಅನ್ಯಾಯವನ್ನು ತಡೆಗಟ್ಟುತ್ತಿದೆ ? ಲಂಚ ಅಲ್ಲಿ ತಾಂಡವವಾಡುತ್ತದೆ, ಉಕ್ಕಡಗಳ ಸಿಬ್ಬಂದಿಯವರಿಂದ ನಿಮ್ಮ ಚುನಾವಣೆಗಳಿಗೆ ಬಲವಂತದ ಕಾಣಿಕೆ ಪಡೆದು, ಅವರುಗಳು ಮಾಡುವ ಸುಲಿಗೆಗೆ ನೀವೂ ಅಪರೋಕ್ಷ ಬೆಂಬಲ ನೀಡುತ್ತಿದ್ದೀರಿ ರಾಜೀನಾಮೆ ಕೊಡಿ" ಎಂದು ವಿರೋಧ ಪಕ್ಷದ ದೊಡ್ಡ ಗಂಟಲಿನವನೊಬ್ಬ ಬೊಬ್ಬೆ ಇಟ್ಟ.

* * * *

ಆ ಊರಿನ ಅವನ ಸೋದರಳಿಯನಿಗೆ ಉಕ್ಕಡದ ಕಂಟ್ರಾಕ್ಟು ದೊರಕಿರಲಿಲ್ಲ.

* * * *

"ಸುಳ್ಳಿನ ಕಂತೆ, ಮಾನ್ಯ ಸದಸ್ಯರು ಹೇಳಿರುವುದು ; ನಿಖರವಾದ ಉದಾಹರಣೆ ಕೊಟ್ಟರೆ, ಜರೂರು ತನಿಖೆ ಏರ್ಪಡಿಸುತ್ತೇವೆ" ಎಂದು ಸರ್ಕಾರದ ಮುಖವೊಂದು ಮಾರ್ದನಿ ಬೊಬ್ಬರಿಸಿತು.

ವಿರೋಧ ಪಕ್ಷದ ಗಂಟಲಿಗೆ ಉಪ್ಪಿನಕಾಯಿನ ರಸ ಹಚ್ಚಿದಹಾಗೆ ಆಯಿತು. ಕೋಪ ಉಕ್ಕಿತು, ಅರಿಚೇಬಿಟ್ಟರು. "ಗುಬ್ಬಿನೆಲೆ ಉಕ್ಕಡದವರು ಲಕ್ಷಾಂತರ ರೂಪಾಯಿ ಸ್ವತ್ತು ಮಾಡಿಕೊಂಡಿದ್ದಾರೆ. ನಮ್ಮ ರಾಜ್ಯದ ಗಡಿಯಲ್ಲಿರುವ ಆ ಉಕ್ಕಡದ ರಸ್ತೆಯಲ್ಲೇ ನೆರೆರಾಜ್ಯಕ್ಕೆ ಹೋಗುವ ಹೆದ್ದಾರಿ ಇದೆ. ನಮ್ಮ ಸಂಪತ್ತೆಲ್ಲಾ ಅಲ್ಲಿಗೆ ಹರಿಯುತ್ತಿದೆ. ಅದರ ವಿಷಯ ನನಗೆ ಚೆನ್ನಾಗಿ ಗೊತ್ತು. ಆ ಕಡೆಯವನೇ ನಾನು. ವಿಚಾರಿಸಿರಿ, ನ್ಯಾಯ ನಿಯತ್ತು ನಿಮಗಿದ್ದರೆ. ನಿಷ್ಪಕ್ಷಪಾತವಾಗಿ ವಿಚಾರಿಸ್ರಿ" ಎಂದು.

" ಭೇಷಕ್, ವಿಚಾರಿಸ್ತೀವಿ, ಇವತ್ತೇ ಗುಪ್ತದಳದವರೊಡನೆ, ಲಂಚ ನಿರೋಧ ಶಾಖೆಯವರನ್ನು ಜತೆ ಮಾಡಿ ಬಲೆ ಹಾಕ್ತೀವಿ" ಎಂದು ಸರಕಾರದ ಆ ಮೋರೆ ಅಭಯ ಮುದ್ರೆ ಪ್ರದರ್ಶಿಸಿ, ನಕ್ಕಿತು.

* * * *

ಲಂಚ ನಿರೋಧ ಶಾಖೆಯವರು ಪೋಲೀಸ್ ಗುಪ್ತದಳದವರೊಡನೆ ಲಾರಿಯ ತುಂಬ ಭತ್ತದ ಮೂಟೆ ತುಂಬಿಕೊಂಡು, ಗುಬ್ಬಿನೆಲೆ ಹೆದ್ದಾರಿಯಲ್ಲಿ ಹೊರಟರು. ಇನ್ನೇನು ಉಕ್ಕಡ ಸಿಕ್ಕಬೇಕು ; ಅಲ್ಲಿ ಕುರುಡು ಭಿಕ್ಷುಕನನ್ನು ಕಂಡರು, ಲಾರಿಯಲ್ಲಿದ್ದ ಗುಪ್ತದಳದವರು, "ಈ ದಾರಿಯಲ್ಲಿ ಈ ಭಿಕ್ಷುಕನಿಗೆ ಏನು ತಾನೇ ಸಿಗತ್ತೆ." ಎಂದೊಬ್ಬ ಹೇಳಿದ. "ಕುರುಡನಿಗೆ ಯಾವ ದಾರಿ ಅಂತ ಏನು ಗೊತ್ತು ? ಕರೆದು

ಕೊಂಡು ಬಂದು. ನಿಲ್ಲಿಸಿದ ಕಡೆ ನಿಂತುಕೊಂಡು, ಭಿಕ್ಷೆ ಬೇಡುತ್ತಾನೆ. ಇಲ್ಲಿ ಯಾಕೆ ನಿಲ್ಲಿಸಿದೆ ಅಂತ ಆವನ ಹೆಂಡತೀನ ಕೇಳಬೇಕು " ಎಂದು ಇನ್ನೊಬ್ಬ ಮುಳ್ಳು ಮಾತು ಗಳಿಂದ ಉತ್ತರಿಸಿದ.

ಲಾರಿಯ ಶಬ್ದ ಕೇಳಿಸಿತು. ನಿಲ್ಲಲಿಲ್ಲ ಗಾಡಿ.

ಕಣ್ಣಿಲ್ಲಾದ ಪರದೇಶಿ. ಶಿವಾ !
ಶಿವನೇ ಭಗವಂತ, ಅತ್ತೆ ಮಾವ, ಶಿವಾ "

ಎಂದು ಭಿಕ್ಷುಕ ಕುರುಡ ಬೊಬ್ಬೆಯಿಟ್ಟ. ಲಾರಿಯನ್ನು ಉಕ್ಕಡದವರು ಹಿಡಿದು ನಿಲ್ಲಿಸಿದರು. ಜಪ್ತಿ ಮಾಡಿದ ತರಹ, ಲಾರಿಯನ್ನೂ ಅದರಲ್ಲಿದ್ದ ಮೂಟೆ ಗಳನ್ನೂ, ಸಂಬಂಧಪಟ್ಟ ರಹದಾರಿ ಪತ್ರಗಳನ್ನೂ ಪರೀಕ್ಷಿಸ ತೊಡಗಿದರು.

ಲಂಚ ನಿರೋಧ ಶಾಖೆಯ, ಛದ್ಮವೇಷಧಾರಿಯಾಗಿದ್ದ ಒಬ್ಬ, ಒಂದು ಹಸಿರು ನೋಟನ್ನು ತೆಗೆದು, ಉಕ್ಕಡದವನಿಗೆ ಕೊಡ ಹೋದ. ಉಕ್ಕಡದವ ಸೀಟಿ ಹೊಡೆದ. ಗುಬ್ಬಿನೆಲೆಯ ಪೋಲಿಸ್ ಕಾನ್ಸ್ಟೆಬಲ್ ಇಬ್ಬರು ಉಕ್ಕಡದ ಕಟ್ಟಡದ ಹಿಂದಿನಿಂದ ಓಡಿ ಬಂದರು. ಉಕ್ಕಡದವ ಹೇಳಿದ; "ನೋಡ್ರಿ ! ಈ ಬದ್ಮಾಷು ಲಂಚಕೊಡುಕ್ಕೆ ಬಂದಿದ್ದಾನೆ. ಇದನನ್ನು ಅರೆಸ್ಟ್‌ಮಾಡಿ, ನೂರು ರೂಪಾಯಿ ನೋಟು ಕೊಡುಕ್ಕೆ ಬಂದ " ಎಂದು. ಪೋಲೀಸ್ ಕಾನ್ಸ್ಟೆಬಲ್ಲರು ಛದ್ಮವೇಷಧಾರಿ ಗುಪ್ತದಳದವನನ್ನು ನೋಟು ಸಮೇತ ಹಿಡಿದರು. ಜಭರ್ದಸ್ತಾಗಿ ಹಿಡಿದು ಕೊಂಡರು. ಹಳ್ಳಿ ವಸ್ತಾದರು ಅವರು.

ಪೋಲೀಸ್ ಗುಪ್ತದಳದವರು, ತಮ್ಮ ಗುರುತಿನ ಬಿಲ್ಲೆಗಳನ್ನು ತೋರಿಸಿ, ಊರಿನಿಂದ ಪೋಲೀಸ್ ಇನ್ಸ್ಪೆಕ್ಟರನ್ನು ಕರೆಸಿ, ತಮ್ಮ ಕೆಲಸವನ್ನು ವಿಶದ ಪಡಿಸುವ ತನಕ, ಇಬ್ಬರು ಪೋಲೀಸ್ ಕಾನ್ಸ್ಟೆಬಿಲ್ಲುಗಳು ಬಿರುಸಾಗಿಯೇ ಇದ್ದರು.

* * * *

"ನಿಸ್ಪೃಹತೆಗೆ, ನಿಯಿತ್ತಿಗೆ, ಗುಬ್ಬಿನೆಲೆಯ ಉಕ್ಕಡದ ಸಿಬ್ಬಂದಿಯವರು ಮಾದರಿಯಾಗಿದ್ದಾರೆ. ಹೀಗೆ ಹೀಗೆ ಬಲೆ ಹೂಡಿದೆವು. ಹೀಗೆ ಹೀಗೆ ಫಲಿತಾಂಶ ಅಂತ ಬರೆದು ಮೇಲಕ್ಕೆ ಕಳಿಸಿದರು, ವರದಿಯನ್ನು.

ಸರಕಾರದ ಮುಖ ಹಿಗ್ಗಿ ಹಿಗ್ಗಿ ಹೀರೆಕಾಯಿಯಾಗಿ, ವಿರೋಧಪಕ್ಷದ ದೊಡ್ಡ ಗಂಟಲನ್ನು ಕರೆದು, ಎಲ್ಲವನ್ನು ತಿಳಿಸಿತು. ಮೂದಲಿಸಿ ನಕ್ಕಿತು.

ವಿರೋಧ ಪಕ್ಷದ ದೊಡ್ಡ ಗಂಟಲು ಗಹಗಹಿಸಿ ನಕ್ಕಿತು. "ಎಂಥಹ ಮಂಕ್ರಿ ನೀವು ! ಉಕ್ಕಡದ ತುಸುದೂರದಲ್ಲಿ ಕುರುಡ ಭಿಕ್ಷುಕ ನಿಂತಿರ್ತಾನೆ ಆವನಿಗೆ ಹಸಿರು ನೋಟು ಕೊಟ್ಟರೆ, ಆಗ ನೀವು ಮುಂದೆ ಸಲೀಸಾಗಿ ಹೋಗಬಹುದು. ಉಕ್ಕಡದ ಸಿಬ್ಬಂದಿ ಸ್ವಂತವಾಗಿ, ಕೈಯ್ಯಾರ ಲಂಚ ಇಸುಕೊಳ್ಳುವಷ್ಟು ಮಂಕರಲ್ರೀ !" ಎಂದು ಹೇಳಿತು.

ಸ್ವಲ್ಪ ಬಿರುಸು ಮಾತು ಕತೆಗಳಾದಮೇಲೆ, ಒಪ್ಪಂದವಾಯಿತು. ವಿರೋಧ ಪಕ್ಷದ ಗಂಟಲು, ಸರಕಾರದ ಆ ಮುಖದೊಂದಿಗೆ ಲಾರಿಯಲ್ಲಿ ಹೋಗಿ ಬಲೆ ಹೂಡ ಬೇಕು ಅಂತ. ತನಿಖೆಯನ್ನು ಗುಟ್ಟಾಗಿ ಮಾಡಬೇಕು ಅಂತ. ಹೊರಟಿತು ದೊಡ್ಡ ದಳ. ಗುಬ್ಬಿನೆಲೆಯ ಉಕ್ಕಡದ ಹೆದ್ದಾರಿಯಲ್ಲಿ. ಸಕ್ಕರೆ ಮೂಟೆಗಳನ್ನು ಹೇರಿ ಕೊಂಡು, ರಹದಾರಿ ಚೀಟಿಯಿಲ್ಲದೆ—

ಭಿಕ್ಷುಕನ ಹತ್ತಿರ ನಿಂತಿತು ಲಾರಿ. ದೊಡ್ಡ ಗಂಟಲು ನೂರು ರೂಪಾಯಿ ನೋಟನ್ನು ಭಿಕ್ಷುಕನ ಕೈಯ್ಯಲಿಟ್ಟ.

"ಕಣ್ಣಿಲ್ಲಾದ ಪರದೇಶಿ ಶಿವಾ"
ಶಿವನೇ ಭಗವಂತ
ತಾಯಿ ತಂದೆ ಶಿವಾ !"

ಎಂದು ಕುರುಡ ಭಿಕ್ಷುಕ ಗಟ್ಟಿಯಾಗಿ ನೋಟನ್ನು ತಡವರಿಸುತ್ತಾ, ಒಲವಿನಿಂದ, ಹಾಡಿದ.

ಲಾರಿ ಮುಂದೆ ಹೋಗಿ, ಉಕ್ಕಡದ ಹತ್ತಿರ ನಿಂತಿತು. ತನಿಖೆಗೆ ಶುರುವಾಯಿತು ಮೂಟೆಗಳ ಲೆಕ್ಕಮಾಡಿ ಆಯಿತು. ಲಾರಿಯ ಡ್ರೈವರನ ಕೈಲಿ ಉಕ್ಕಡದ ಒಬ್ಬಾತ ಒಂದು ಕಾಗದವನ್ನು ಬರೆದು ತಂದು ಕೊಟ್ಟು "ರೈಟ್" ಹೋಗಬಹುದು ಎಂದು ಹೇಳಿದ.

ಸರಕಾರದ ಆ ಮುಖ ಇಳಿಯಿತು. "ಹೇಗ್ರಿ ರೈಟ್ ಕೊಟ್ರಿ ! ರಹದಾರಿ ಚೀಟಿ ಎಲ್ರಿ ?" ಎಂದು ಘರ್ಜಿಸಿತು. ಸರಕಾರದ ಆ ಮುಖ ಇಳಿದಾಗ, ಲಾರಿಯಲ್ಲಿ ಕೂತಿದ್ದ ಇನ್ನೊಬ್ಬ ಕೂಲಿಯವ ತಾನು ಹೊದ್ದಿದ್ದ ಕಂಬಳಿಯನ್ನು ತೆಗೆದು, ಪೋಲೀಸ್ ಸೂಪರಿಂಟೆಂಡ್ ಸಮವಸ್ತ್ರದಲ್ಲಿ ಇಳಿದು ಪ್ರತ್ಯಕ್ಷನಾದ,

ಉಕ್ಕಡದವ ಬೆದರಲಿಲ್ಲ ಹೆದರಲಿಲ್ಲ. "ಸ್ವಾಮಿ ! ತಾವು ಯಾರೋ ತಿಳಿಯದು ಆದರೆ ಪೋಲೀಸ್ ಸೂಪರಿಂಟೆಂಡೆಂಟರವರನ್ನು ಕಂಡಮೇಲೆ, ತಾವು ಯಾರೋ ದೊಡ್ಡ ಧಣಿಗಳರಬಹುದು ಅಂತ ಖಚಿತವಾಯಿತು. ಆದುದರಿಂದ ಬಿನ್ನವಿಸಿ ಕೊಳ್ಳುತ್ತಿದ್ದೇನೆ. ಇಲ್ಲದೆ ಇದ್ದರೆ ದವಡೆಗೆ ಎರಡು ಮಡಗಿ ಹೋಗೋ ದಾಸಯ್ಯ, ನೀನ್ಯಾರೋ ನನ್ನ ಕೇಳುಕ್ಕೆ ಎಂದು ಹೇಳುತ್ತಿದ್ದೆ. ಲಾರಿ ಡ್ರೈವರನ ಕೈಲಿದೆನೋಡಿ ರಹದಾರಿ ಚೀಟಿ, ಅದರ ನಕಲು ಉಕ್ಕಡದಲ್ಲಿದೆ. ಪರಾಂಬರಿಸಬೇಕು ಎಂದು ಹೇಳಿ, ಡ್ರೈವರಿನ ಕೈಯಿಂದ ತಾನು ಆಗತಾನೆ ಕೊಟ್ಟಿದ್ದ ಕಾಗದವನ್ನು ತೆಗೆದು ಕೊಟ್ಟ, ಉಕ್ಕಡದ ಕೋಣೆಗೆ ಹೋಗಿ ರಿಜಿಸ್ಟರ್ ತಂದು ರಹದಾರಿ ಚೀಟಿಯ ನಂಬರು ವಿವರಗಳನ್ನು, ಬರೆದಿರುವುದನ್ನು ತೋರಿಸಿದ.

ಸರಕಾರದ ಮುಖ ಸ್ವಲ್ಪ ಪೆಚ್ಚಾಯಿತು. ವಿರೋಧಪಕ್ಷದ ದೊಡ್ಡ ಗಂಟಲು, "ಭಿಕ್ಷದವನನ್ನು ಕರೆಸಿ, ವಿಚಾರಿಸಿಕೊಳ್ತೀನಿ ನಾನು" ಎಂದು ನುಡಿಯಿತು.

ಪೋಲೀಸ್ ಸೂಪರಿಂಟೆಂಡೆಂಟರ ಹುಕುಂ ಪ್ರಕಾರ ಪೋಲೀಸ್ ಕಾನ್ಸ್‌ಟೇಬಲ್ ಓಡಿ ಹೋಗಿ, ಕುರುಡ ಭಿಕ್ಷುಕನನ್ನು, ನೂರು ರೂಪಾಯಿ ನೋಟು ಸಮೇತ, ಕರೆದುಕೊಂಡು ಬಂದ.

"ನೂರು ರೂಪಾಯಿ ಭಿಕ್ಷ ನಿನಗೆ ಯಾರಾದರೂ ಕೊಡುವ ವಾಮೂಲಿದೆಯೇ" ಎಂದು ಕೇಳಿತು ವಿರೋಧ ಪಕ್ಷ

ಕಣ್ಣಿಲ್ಲಾದ ಪರದೇಶಿ, ಶಿವಾ! ನೂರು ರೂಪಾಯಿ ನೋಟು ಯಾವುದು, ಹತ್ತು ರೂಪಾಯಿ ನೋಟು ಯಾವುದು? ಸಿನಿಮಾ ಚೀಟಿಯಾವುದು, ಅಂತ ನನಗೇನು ತಿಳಿಯುತ್ತೆ, ಶಿವಾ! ಶಿವನೇ ಭಗವಂತ, ಪರದೇಶಿ ನಾನು" ಎಂದು ಕುರುಡ ಭಿಕ್ಷುಕ ಗೋಗರೆದ.

ವಿರೋಧ ಪಕ್ಷದ ಗಂಟಲು ಗುಡುಗುತ್ತಾ ಹೇಳಿತು. "ಸ್ವಾಮಿ! ಈ ಕುರುಡನಿಗೆ ನೋಟು ಕೊಟ್ಟರೆ, ಬೆರಳುಗಳಿಂದಲೇ ಒಂದೇ, ಐದೇ, ಹತ್ತೇ, ನೂರೇ ಎಂದು ತಿಳಿದುಕೊಳ್ಳುತ್ತಾನೆ, ಕಳ್ಳ ಬಡವ! ಇವನೇ ಉಕ್ಕಡದವರಿಗೆ ಸುಳು ಕೊಡ್ತಾನೆ. ಖದೀಮ ಹೂ ಎಂದರೆ ಉಕ್ಕಡದವರು ಕೃತಕ ರಹದಾರಿ ಚೀಟಿ ತಯಾರಿಸಿ ಕ್ಷಣದಲ್ಲಿ ಕೊಡುತ್ತಾರೆ, ಅದೇ ಈಗ ಆಗಿರೋದು" ಅಂತ.

ಉಕ್ಕಡದವನು ದೈನ್ಯದಿಂದ ಬಿನ್ನವಿಸಿದ; ಸರಕಾರದ ಮುಖಕ್ಕೆ "ಮಹಾಸ್ವಾಮಿನ್! ತಾವು ಗಾದೆ ಕೇಳಿರಬೇಕು. ಕುರುಡನ ಹೆಂಡತಿಗೆ ದೇವರೇ ರಕ್ಷಣೆ" ಅಂತ. ಒಂದೊಂದು ಸಾರ್ತಿ. ಕುರುಡನ ಕೈಯಲ್ಲಿ ನೂರು ರೂಪಾಯಿ ನೋಟಿಟ್ಟು ಅವನ ಹೆಂಡತಿಯನ್ನು ನೋಡಹೋಗುವ ಮಂದಿ ಇತ್ತಕಡ ಬರುವುದುಂಟು. ಚೆಂದುಳ್ಳಿ ಹೆಣ್ಣು ಆಕಿ. ಮದುವೆಯಾದಮೇಲೆ ಇವನ ಕಣ್ಣು ಇಂಗಿಹೋಯಿತು. (ವಿರೋಧಪಕ್ಷದ ದೊಡ್ಡ ಗಂಟಲನ್ನು ತೋರಿಸುತ್ತಾ) ಈತ ಈ ಕಡೆ ಆಗಾಗ್ಗೆ ಬಂದು ಭಿಕ್ಷುಕನ ಕೈಲಿ ಹಣ ಇಡುವುದನ್ನು ಕಂಡಿದ್ದೇನೆ. ಬೊಗಸೆ ಹಣ ಸುರಿಯುವುದನ್ನೂ ಕಂಡಿದ್ದೇನೆ" ಎಂದು.

"ಹಾಗೇನ್ರೀ! ವಿಷಯ" ಎಂದು ಉದ್ಗಾರ ತೆಗೆಯಿತು, ಸರ್ಕಾರದ ಮುಖ. ತನ್ನ ಸಿಂಬಳದಲ್ಲೇ ಸಿಕ್ಕಿಹಾಕಿಕೊಂಡ ನೊಣದಂತೆ, ವಿರೋಧ ಪಕ್ಷದ ಗಂಟಲು ಮಿಲಿ ಮಿಲಿ ಒಣಗಿ ಒದ್ದಾಡಿ, ನಿಶ್ಶಬ್ದವಾಯಿತು.

ಆಡುಗೂಲಜ್ಜಿ ಕತೆತರಹ, ಮುಕ್ತಾಯದಲ್ಲಿ, ಎಲ್ಲರೂ ಸುಖವಾಗಿ ಆಮೇಲೆ ಬಾಳಿಕೊಂಡಿದ್ದರು.

—ಕುಮಾರ್


For 3 way Beauty Treatment....
RAJA
SNOW
AMLA HAIR OIL, KASTURI SOAP
MANYAM & CO. BANGALORE MADRAS MADURAI BOMBAY

Printed by B. S. Iyengar, Bangalore-2

Publisher—B. N. Gupta Editor—M. Shivaram